2019 ಕ.ತೀ.ವ 783

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಸುಧೀಂದ್ರರಾವ್

### ಅಸೀಮ್ ಷರೀಫ್ –ವಿರುದ್ಧ– ರಾಷ್ಟ್ರೀಯ ತನಿಖಾ ಏಜನ್ಸಿ*

ಭಾರತ ಸಂವಿಧಾನದ 226ನೇ ಮತ್ತು 227ನೇ ಅನುಚ್ಛೇದಗಳ ಅಡಿಯಲ್ಲಿನ ರಿಟ್ ಅರ್ಜಿ.

ಭಾರತ ದಂಡ ಸಂಹಿತೆಯ 302ನೇ ಮತ್ತು 34ನೇ ಪ್ರಕರಣಗಳು;
ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣ;

ರುದ್ರೇಶ್ ಎಂಬ ವ್ಯಕ್ತಿಯ ಹತ್ಯೆ ಕುರಿತು ಕಮರ್ಷಿಯಲ್ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ಅಪರಾಧ ಸಂಖ್ಯೆ: 12/2016ರಲ್ಲಿ ಭಾರತ ದಂಡ ಸಂಹಿತೆಯ 302ನೇ ಮತ್ತು 34ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಪ್ರಕರಣ ದಾಖಲಿಸಲಾಯಿತು. ತರುವಾಯ ಕೇಂದ್ರ ಗೃಹ ವ್ಯವಹಾರಗಳ ಮಂತ್ರಾಲಯವು ರಾಷ್ಟ್ರೀಯ ತನಿಖಾ ಏಜನ್ಸಿಗೆ ಪ್ರಕರಣವನ್ನು ತನಿಖೆಗೆ ವಹಿಸಿತು. ತನಿಖೆ ನಂತರ, ಸದರಿ ಪ್ರಕರಣದ 1ರಿಂದ 5ರವರೆಗಿನ ಆರೋಪಿತ ವ್ಯಕ್ತಿಗಳ ವಿರುದ್ಧ ವಿಚಾರಣಾ ನ್ಯಾಯಾಲಯದ ಮುಂದೆ ಅಂತಿಮ ವರದಿ ಸಲ್ಲಿಸಲಾಯಿತು. ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿದ್ದರಲ್ಲಿ ಅಥವಾ ತನಿಖೆ ನಡೆಸಿದ್ದರಲ್ಲಿ ಅಥವಾ ಆರೋಪಿತ ವ್ಯಕ್ತಿಗಳ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿದ್ದರಲ್ಲಿ ಯಾವುದೇ ತಾರ್ಕಿಕತೆ ಇಲ್ಲವೆಂದು ಕ್ಲೇಮು ಮಾಡಿ ಇದರಲ್ಲಿನ ಅರ್ಜಿದಾರನು (ಆರೋಪಿ ಸಂಖ್ಯೆ 5) ತನಿಖೆಯಲ್ಲಿ ಹೇಳಲಾದ ಅಪರಾಧಗಳ ಸಂಬಂಧದಲ್ಲಿನ ಪ್ರಕರಣದಿಂದ ವಿಮೋಚನೆಗೊಳಿಸುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದಾನೆ. ಮಾನ್ಯ ವಿಚಾರಣಾ ನ್ಯಾಯಾಧೀಶರು ಸದರಿ ಅರ್ಜಿಯನ್ನು ವಜಾಗೊಳಿಸಿದ್ದಾರೆ. ಮಾನ್ಯ ವಿಶೇಷ ನ್ಯಾಯಾಧೀಶರ ಆದೇಶದಿಂದ ಬಾಧಿತನಾಗಿ

*ರಿಟ್ ಅರ್ಜಿ ಸಂಖ್ಯೆ: 13891/2008 (ಜಿಎಮ್–ಆರ್‌ಇಎಸ್), ದಿನಾಂಕ 22ನೇ ನವೆಂಬರ್, 2018.

ಮತ್ತು ತನ್ನ ನಿರಪರಾಧಿತ್ವವನ್ನು ಸಾಬೀತುಪಡಿಸಲು ಅರ್ಜಿದಾರನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದೊಂದಿಗೆ ಓದಲಾದ ಭಾರತ ಸಂವಿಧಾನದ 226ನೇ ಮತ್ತು 227ನೇ ಅನುಚ್ಛೇದಗಳ ಅಡಿಯಲ್ಲಿ ಈ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾನೆ. ರುದ್ರೇಶನು ಆರ್.ಎಸ್.ಎಸ್.ನ ಸದಸ್ಯನೆಂದು ನಿರ್ಣಯಿಸಲು ಯಾವುದೇ ದಸ್ತಾವೇಜೀಯ ಸಾಕ್ಷ್ಯವಿರಲಿಲ್ಲ ಮತ್ತು ಮೃತ ರುದ್ರೇಶನು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿದ್ದನೆಂದು ಸಹ ಸ್ಥಿರೀಕರಿಸಲಾಗಿತ್ತು ಎಂಬುದು ಅರ್ಜಿದಾರನ ಕ್ಲೇಮಾಗಿದೆ.

ಅರ್ಜಿದಾರನ ವಿರುದ್ಧದ ಸಂಗತಿಗಳನ್ನು ತೀರ್ಮಾನಿಸುವ ಸಲುವಾಗಿ ಸರ್ಕಾರವು, ಎನ್‌ಐಎಗೆ ಪ್ರಕರಣವನ್ನು ವಹಿಸಲು ಆದೇಶಿಸಿತು ಎಂದು ಅರ್ಜಿದಾರರ ಪರ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ ಅವರು, ರಾಷ್ಟ್ರೀಯ ತನಿಖಾ ಅಧಿನಿಯಮದ ಮತ್ತು ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967ರ ಅಡಿಯಲ್ಲಿನ ವಿವಿಧ ಪ್ರಕರಣಗಳನ್ನು, ಅರ್ಜಿದಾರನ ಮತ್ತು ಇತರರ ವಿರುದ್ಧ ವಿವೇಚನಾರಹಿತವಾಗಿ ಜಾರಿಗೊಳಿಸಲಾಗಿದೆ ಎಂದು; ಮೃತ ರುದ್ರೇಶನು ಆರ್.ಎಸ್.ಎಸ್. ಸದಸ್ಯನಾಗಿದ್ದನು ಅಥವಾ ಇನ್ನಾವುದೇ ರೀತಿಯಲ್ಲಿ "ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ" ಆರ್.ಎಸ್.ಎಸ್. ನಂಟು ಹೊಂದಿದ್ದನೆಂದು ತೋರಿಸಿಕೊಡಲು ಯಾವುದೇ ದಸ್ತಾವೇಜೀಯ ಸಾಕ್ಷ್ಯವಾಗಲಿ ಅಥವಾ ಮೌಖಿಕ ಸಾಕ್ಷ್ಯವಾಗಲಿ ಇಲ್ಲವೆಂದು; ಆರೋಪಗಳು ನೀರಸ ಮತ್ತು ಅಸ್ಪಷ್ಟವಾಗಿವೆ ಎಂದು ನಿವೇದಿಸಿಕೊಂಡಿದ್ದಾರೆ. ಆರೋಪ ಪಟ್ಟಿ ಮತ್ತು ಪ್ರಾಸಿಕ್ಯೂಷನ್‌ನ ಕ್ಲೇಮಿನ ಪ್ರಕಾರ ಸಹ, ಮೃತ ರುದ್ರೇಶನು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿದ್ದನೆಂದು ಮಾನ್ಯ ನ್ಯಾಯವಾದಿಗಳು ಒತ್ತಿ ಹೇಳಿದ್ದಾರೆ.

ಸಿ.ಡಬ್ಲ್ಯು.1ರಿಂದ 53, 55ರಿಂದ 76, 78ರಿಂದ 86, 86ರಿಂದ 92, 94ರಿಂದ 96, 98ರಿಂದ 112 ಇವರು, ಅರ್ಜಿದಾರನ ವಿರುದ್ಧ ಯಾವುದೇ ಅಪರಾಧದಲ್ಲಿ ಸಿಕ್ಕಿಸುವ ಸಂದರ್ಭವನ್ನು ಹೇಳಿರುವುದಿಲ್ಲ ಎಂದು ಸಹ ನಿವೇದಿಸಿಕೊಂಡಿರುತ್ತಾರೆ.

ಪ್ರತ್ಯರ್ಜಿದಾರರ ಪರ ನ್ಯಾಯವಾದಿಗಳು, ಅರ್ಜಿದಾರನ ವಿರುದ್ಧ ದಾಖಲಿಸಿದ ಮೊಕದ್ದಮೆಯಲ್ಲಿ ಹೇಳಲಾದ ಕಾನೂನಿನ ಉಪಬಂಧಗಳ ಎಲ್ಲಾ ಅಗತ್ಯತೆಗಳನ್ನು

ಅರ್ಜಿದಾರನು ಈಡೇರಿಸಿದ್ದಾನೆಂದು ನಿವೇದಿಸಿಕೊಂಡಿದ್ದಾರೆ. ಅಲ್ಲದೆ ಅವರು, ಅರ್ಜಿದಾರನ ವಿಮೋಚನೆಗೆ ಅರ್ಜಿ ಸಲ್ಲಿಸುವ ಮೂಲಕ ಆತನಿಗೆ ದೊರಕುವ ಪರಿಹಾರವನ್ನು ಸಹ ಸಂಪೂರ್ಣವಾಗಿ ಬಳಸಿಕೊಂಡಿದ್ದಾನೆಂದು, ಆದಾಗ್ಯೂ, ಅದನ್ನು ತಳ್ಳಿಹಾಕಲಾಗಿದೆ; ಪ್ರಾರಂಭದಲ್ಲಿ, ಕಮರ್ಷಿಯಲ್ ರಸ್ತೆ ಪೊಲೀಸ್‌ರು ಸಂಗ್ರಹಿಸಿದ ಸಾಕ್ಷ್ಯವನ್ನು ಮತ್ತು ತರುವಾಯದಲ್ಲಿ ಎನ್‌ಐಎ ತೋರಿಸಿದ ಐವರು ಆರೋಪಿತ ವ್ಯಕ್ತಿಗಳು ಪಿಎಫ್‌ಐನ ಸದಸ್ಯರಾಗಿದ್ದಾರೆ ಮತ್ತು ಅವರಿಂದ ಜಪ್ತಿ ಮಾಡಿದ ಅಪರಾಧದಲ್ಲಿ ಸಿಕ್ಕಿಸುವ ಸಾಕ್ಷ್ಯಗಳು ಅವರ ಅಪರಾಧದ ಉದ್ದೇಶವನ್ನು ಎರಡರಷ್ಟು ಸ್ಥಿರೀಕರಿಸಿವೆ ಎಂದು ನಿವೇದಿಸಿಕೊಂಡು ಅರ್ಜಿದಾರರು ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿದ್ದನ್ನು ಸಾಬೀತುಪಡಿಸಲು ಮಂಡಿಸಿರುವ ಹಲವಾರು ಸಾಕ್ಷ್ಯ ಮತ್ತು ರುಜುವಾತುಗಳ ಬಗ್ಗೆ ಚರ್ಚಿಸಿದ್ದಾರೆ.

ಎರಡೂ ಕಡೆಯ ಪಕ್ಷಕಾರರ ಪರ ನ್ಯಾಯವಾದಿಗಳು ತಮ್ಮ ತಮ್ಮ ವಾದಗಳ ಸಮರ್ಥನೆಗೆ ಸರ್ವೋಚ್ಚ ನ್ಯಾಯಾಲಯದ ಮತ್ತು ಉಚ್ಚ ನ್ಯಾಯಾಲಯದ ಹಲವಾರು ತೀರ್ಪುಗಳನ್ನು ಉಲ್ಲೇಖಿಸಿ ವಾದ ಮಂಡಿಸಿದ್ದಾರೆ. ಮಂಡಿಸಲಾದ ಸಾಕ್ಷ್ಯ ಮತ್ತು ರುಜುವಾತುಗಳು ಹಾಗೂ ನ್ಯಾಯಾಲಯಗಳ ತೀರ್ಪುಗಳನ್ನು ಕುರಿತು ವಿವರವಾಗಿ ವಿಶ್ಲೇಷಿಸಿ ಅರ್ಜಿಯ ಗುಣಾರ್ಹತೆಗಳನ್ನು ತೂಗಿ ನೋಡಿ, ಈ ನ್ಯಾಯಾಲಯವು ಗುಣಾರ್ಹತೆಗಳಿಲ್ಲದ ಈ ಅರ್ಜಿಯು ತಳ್ಳಿಹಾಕಲು ಯೋಗ್ಯವಾಗಿದೆ ಎಂದು ನಿರ್ಣಯಿಸಿ, ಅರ್ಜಿಯನ್ನು ತಳ್ಳಿಹಾಕಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** — ***ಪ್ಯಾರಾದಲ್ಲಿ***

1. *2001(1) ಎಸ್‌ಸಿಸಿ 784*
   *ಕೇರಳ ರಾಜ್ಯ –ವಿರುದ್ಧ– ರನೀಫ್* — *(ಉಲ್ಲೇ) 7*
2. *(2011) 1 ಎಸ್‌ಸಿಸಿ (ಕ್ರಿ) 855*
   *ಅರೂಪ್ ಭೂಯಾನ್ –ವಿರುದ್ಧ– ಅಸ್ಸಾಮ್ ರಾಜ್ಯ* — *(ಉಲ್ಲೇ) 7*

ಅರ್ಜಿದಾರರ ಪರ : ಮೆ: ಬಾಲನ್ ಅಂಡ್ ಅಸೋಸಿಯೇಟ್ಸ್ ಪರವಾಗಿ ಶ್ರೀ ಎಸ್. ಬಾಲಕೃಷ್ಣನ್, ನ್ಯಾಯವಾದಿಗಳು

ಪ್ರತ್ಯರ್ಜಿದಾರರ ಪರ : ಶ್ರೀ ಪಿ. ಪ್ರಸನ್ನಕುಮಾರ್, ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್

## ಆಜ್ಞೆ

**ನ್ಯಾಯಮೂರ್ತಿ ಎನ್.ಕೆ. ಸುಧೀಂದ್ರರಾವ್:**

ಪ್ರಾರಂಭದಲ್ಲಿ, ರುದ್ರೇಶ್ ಎಂಬಾತನ ಹತ್ಯೆಯ ಕುರಿತು ಕಮರ್ಷಿಯಲ್ ರಸ್ತೆ ಪೊಲೀಸರು ಭಾರತ ದಂಡ ಸಂಹಿತೆಯ 302ನೇ ಮತ್ತು 34ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ದಿನಾಂಕ: 16.10.2016ರಂದು ಅಪರಾಧ ಸಂಖ್ಯೆ: 124/2016ರಲ್ಲಿ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಬೇಕೆಂದು ಬಂದರು. ದೂರನ್ನು ಜಯರಾಮ್ ಎಂಬಾತನು ಸಲ್ಲಿಸಿದ್ದು, ಆತನನ್ನು ಸಾಕ್ಷಿದಾರ–ಸಿ.ಡಬ್ಲ್ಯು1 ಎಂಬುದಾಗಿ ತೋರಿಸಲಾಗಿದೆ. ಸಿ.ಡಬ್ಲ್ಯು.1 ತನ್ನ ಸ್ನೇಹಿತರಾದ ರುದ್ರೇಶ್, ಹರಿಕೃಷ್ಣ ಮತ್ತು ಕುಮಾರ್ ಎಂಬುವವರೊಂದಿಗೆ ಶ್ರೀನಿವಾಸ ಮೆಡಿಕಲ್ ಸ್ಟೋರ್ಸ್, ಶಿವಾಜಿನಗರ ಇಲ್ಲಿ ಸೇರಿದ್ದಾಗ, ಒಬ್ಬ ವ್ಯಕ್ತಿಯು (ಆರೋಪಿ) ಮೋಟಾರ್‌ಸೈಕಲ್‌ನ ಹಿಂಬದಿ ಸವಾರನಾಗಿ ಬಂದು, ಹರಿತ ಅಂಚಿನ ಮತ್ತು ಮಾರಣಾಂತಿಕ ಮಚ್ಚಿನಿಂದ ರುದ್ರೇಶನನ್ನು ಆತನ ಕುತ್ತಿಗೆಯ ಮೇಲೆ ಬಲ ಬದಿಯಿಂದ ಕೊಚ್ಚಿದನು ಮತ್ತು ಅಲ್ಲಿಂದ ಪರಾರಿಯಾದನು ಹಾಗೂ ರುದ್ರೇಶನನ್ನು ಆಟೋರಿಕ್ಷಾದಲ್ಲಿ ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು, ಅಲ್ಲಿ ಆತನು "ಮರಣ ಹೊಂದಿದ್ದಾನೆ" ಎಂದು ಘೋಷಿಸಲಾಯಿತು ಎಂದು ಪ್ರಥಮ ಮಾಹಿತಿ ವರದಿಯಲ್ಲಿ ಹೇಳಿಕೆ ನೀಡಿದ್ದಾನೆ. ಪ್ರಾರಂಭದಲ್ಲಿ ಈ ಪ್ರಕರಣವನ್ನು, ಭಾರತ ದಂಡ ಸಂಹಿತೆಯ 302 ಮತ್ತು 34ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಕ್ಕಾಗಿ ಅಪರಿಚಿತ

ವ್ಯಕ್ತಿಗಳ ವಿರುದ್ಧ ಕಮರ್ಷಿಯಲ್ ರಸ್ತೆ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ: 124/ 2016ರಲ್ಲಿ ದಾಖಲಿಸಲಾಗಿತ್ತು. ಅಪರಾಧದ ಸಂಬಂಧದಲ್ಲಿ ನಾಲ್ವರು ಆರೋಪಿತ ವ್ಯಕ್ತಿಗಳು ಬಂದಿತರಾಗಿದ್ದರು. ತರುವಾಯದಲ್ಲಿ, ರಾಷ್ಟ್ರೀಯ ತನಿಖಾ ಏಜನ್ಸಿಯು (ಸಂಕ್ಷಿಪ್ತವಾಗಿ 'ಎನ್‌ಐಎ'), ಆರೋಪಿತರ ಪಟ್ಟಿಯಲ್ಲಿ ಕ್ರಮ ಸಂಖ್ಯೆ 5ರಲ್ಲಿರುವ ಅರ್ಜಿದಾರ–ಅಸೀಮ್ ಷರೀಫ್‌ನನ್ನು ಒಳಗೊಂಡ ಆರ್.ಸಿ. ಸಂಖ್ಯೆ: 24/2016ರಲ್ಲಿ ಪ್ರಥಮ ಮಾಹಿತಿಯನ್ನು ದಾಖಲಿಸಿತ್ತು. ಕೇಂದ್ರ ಸರ್ಕಾರದ ಗೃಹ ವ್ಯವಹಾರಗಳ ಮಂತ್ರಾಲಯ (ಆಂತರಿಕ ಭದ್ರತೆ–1 ವಿಭಾಗ), ನಾರ್ತ್ ಬ್ಲಾಕ್, ನವ ದೆಹಲಿ ಇದು, ರಾಷ್ಟ್ರೀಯ ತನಿಖಾ ಅಧಿನಿಯಮದ 8ನೇ ಪ್ರಕರಣದೊಂದಿಗೆ ಓದಲಾದ 6(5)ನೇ ಪ್ರಕರಣದ ಪ್ರಕಾರ, ದಿನಾಂಕ: 07.12.2016ರ ಅದರ ಆದೇಶ ಸಂಖ್ಯೆ: 11011/33/2016–ಐಎಸ್ ಮೂಲಕ ಎನ್‌ಐಎಗೆ ತನಿಖೆಯ ಕಾರ್ಯವನ್ನು ವಹಿಸಿತ್ತು. ಸದರಿ ಆದೇಶದ ಪಾಲನೆಯಲ್ಲಿ, ಎನ್‌ಐಎ, ಹೈದರಾಬಾದ್ ಶಾಖೆ ಇದು, ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 120–ಬಿ, 109, 150, 153ಎ, 302, 201ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ಆರ್.ಸಿ. ಸಂಖ್ಯೆ: 04/16–ಎನ್‌ಐಎ–ಹೆಚ್‌ವೈಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿತು.

2. ತನಿಖೆ ಪೂರ್ಣಗೊಂಡ ನಂತರ, ದಿನಾಂಕ: 21.04.2017ರಂದು 1ರಿಂದ 5ರವರೆಗಿನ ಆರೋಪಿತ ವ್ಯಕ್ತಿಗಳ ವಿರುದ್ಧ ವಿಚಾರಣಾ ನ್ಯಾಯಾಲಯದ ಮುಂದೆ ಅಂತಿಮ ವರದಿಯನ್ನು ಸಲ್ಲಿಸಲಾಯಿತು. ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿದ್ದರಲ್ಲಾಗಲಿ ಅಥವಾ ತನಿಖೆ ನಡೆಸಿದ್ದರಲ್ಲಾಗಲಿ ಅಥವಾ ಆರೋಪಿತ ವ್ಯಕ್ತಿಗಳ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿದ್ದರಲ್ಲಾಗಲಿ ಯಾವುದೇ ತಾರ್ಕಿಕತೆ ಇಲ್ಲವೆಂದು ಅರ್ಜಿದಾರನು ಕ್ಲೇಮು ಮಾಡಿದ್ದಾನೆ. ಅರ್ಜಿದಾರನು, ಮೇಲೆ ಹೇಳಿದ ಅಪರಾಧಗಳ ಸಂಬಂಧದಲ್ಲಿ ತನ್ನನ್ನು ಪ್ರಕರಣದಿಂದ ವಿಮೋಚನೆಗೊಳಿಸುವಂತೆ ಕೋರಿ ಕ್ರಿಮಿನಲ್ ದಂಡ ಸಂಹಿತೆಯ 227ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾನೆ. ಆರೋಪಗಳನ್ನು ರೂಪಿಸಲು ಆದೇಶಿಸಿದ ಮಾನ್ಯ ವಿಚಾರಣಾ ನ್ಯಾಯಾಧೀಶರು/ ವಿಶೇಷ ನ್ಯಾಯಾಧೀಶರು ಅರ್ಜಿಯನ್ನು ವಜಾಗೊಳಿಸಿದ್ದಾರೆ.

ಈ ಸಂದರ್ಭಗಳ ಹಿನ್ನಲೆಯಲ್ಲಿ, ಪರಿಹಾರಕ್ಕಾಗಿ ಒತ್ತಾಯಿಸಲು ತನಗೆ ಯಾವುದೇ ಪರ್ಯಾಯ ಮಾರ್ಗವಿಲ್ಲವೆಂದು ಅರ್ಜಿದಾರನು ಕ್ಲೇಮು ಮಾಡಿದ್ದಾನೆ. ಮಾನ್ಯ ವಿಶೇಷ ನ್ಯಾಯಾಧೀಶರ ಆದೇಶದಿಂದ ಬಾಧಿತನಾಗಿ ಮತ್ತು ತನ್ನ ನಿರಪರಾಧಿತ್ವವನ್ನು ಸಾಬೀತುಪಡಿಸಲು ಅರ್ಜಿದಾರನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದೊಂದಿಗೆ ಓದಲಾದ ಭಾರತ ಸಂವಿಧಾನದ 226ನೇ ಮತ್ತು 227ನೇ ಅನುಚ್ಛೇದಗಳ ಅಡಿಯಲ್ಲಿ ಈ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾನೆ.

3. ಸದರಿ ವಿಮೋಚನಾ ಅರ್ಜಿಯನ್ನು, ವಿಶೇಷ ನ್ಯಾಯಾಲಯದ ಮುಂದೆ ಆರೋಪಿ ಸಂಖ್ಯೆ 5 ಆಗಿರುವ ಇದರಲ್ಲಿನ ಅರ್ಜಿದಾರನು ಸಲ್ಲಿಸಿದ್ದಾನೆ. ಮಾನ್ಯ ವಿಶೇಷ ನ್ಯಾಯಾಲಯವು, ಬೆಂಗಳೂರಿನಲ್ಲಿನ ಎನ್.ಐ.ಎ.ಯನ್ನು ಮೊಕದ್ದಮೆಗಳ ವಿಚಾರಣೆಗಾಗಿ ನಿಯೋಜಿತವಾಯಿತು. ಪ್ರಸ್ತುತ ಮೊಕದ್ದಮೆಯನ್ನು, ಮೇಲೆ ಹೇಳಿದ ಅಪರಾಧಗಳ ಸಂಬಂಧದಲ್ಲಿ, ವಿಶೇಷ ಸಿ.ಸಿ. ಸಂಖ್ಯೆ: 181/2017 ಆಗಿ ಸಂಖ್ಯೆ ನೀಡಲಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ (ಸಂಕ್ಷಿಪ್ತವಾಗಿ ಆರ್‌ಎಸ್‌ಎಸ್) ಸದಸ್ಯರನ್ನು ಕೊಲ್ಲಲು ಮತ್ತು ತಮ್ಮ ಕೃತ್ಯಗಳನ್ನು ಮುಂದುವರಿಸಲು, ಆರೋಪಿ ಸಂಖ್ಯೆ 5 ಆಗಿರುವ ಪ್ರಸ್ತುತ ಅರ್ಜಿದಾರನೊಂದಿಗೆ ಸಂಖ್ಯೆ: 1ರಿಂದ 4ರವರೆಗಿನ ಆರೋಪಿಗಳು ಸಂಚು ಮಾಡಿದರೆಂಬುದು; ಅವರು, ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 302ನೇ ಮತ್ತು 201ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ಎಸಗಿರುವರೆಂಬುದು ಈ ಮೊಕದ್ದಮೆಯಲ್ಲಿ ಸಲ್ಲಿಸಿದ ಅಂತಿಮ ವರದಿಯ ಸಾರಾಂಶವಾಗಿದೆ. ಅರ್ಜಿದಾರನನ್ನು ಸಹ ಒಳಗೊಂಡಿರುವ ಆರೋಪಿತ ವ್ಯಕ್ತಿಗಳು, ಪರವಾನಗಿ ಇಲ್ಲದ ಆಯುಧಗಳನ್ನು ಹೊಂದಿರುವರೆಂದು, ಆ ಮೂಲಕ ಆಯುಧಗಳ ಅಧಿನಿಯಮದ 3ನೇ ಮತ್ತು 27ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯುವಾದ ಅಪರಾಧಗಳು ಅನ್ವಯವಾಗುವವೆಂದು ಹೇಳಲಾಗಿದೆ. ಇದಲ್ಲದೆ, ಆರೋಪಿತ ವ್ಯಕ್ತಿಗಳ ಕೃತ್ಯಗಳು ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 120–ಬಿ, 109, 150, 153ಎ, 302, 201 ಈ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಮನಾಗುತ್ತವೆ.

4. ಹಾಗಾಗಿ, ಮೇಲೆ ಹೇಳಲಾದಂತೆ, ಇತರ ಆರೋಪಿಗಳ ಜೊತೆಗೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದ ಅಡಿಯಲ್ಲಿ ವಿಮೋಚನೆಗೊಳಿಸಲು ಅರ್ಜಿದಾರನು ಕೋರಿರುತ್ತಾನೆ. ಸದರಿ ಅರ್ಜಿಯನ್ನು ದಿನಾಂಕ: 12.01.2018ರಂದು ತಳ್ಳಿಹಾಕಲಾಗಿದೆ.

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದೊಂದಿಗೆ ಓದಲಾದ ಭಾರತ ಸಂವಿಧಾನದ 226ನೇ ಮತ್ತು 227ನೇ ಅನುಚ್ಛೇದಗಳ ಅಡಿಯಲ್ಲಿನ ರಿಟ್ ಅರ್ಜಿಯನ್ನು ಈ ಮೊದಲು ಈ ನ್ಯಾಯಾಲಯದ ಮುಂದೆ ಸಲ್ಲಿಸಲಾಗಿತ್ತು.

5. ರುದ್ರೇಶನು ಆರ್.ಎಸ್.ಎಸ್.ನ ಸದಸ್ಯನೆಂದು ನಿರ್ಣಯಿಸಲು ಯಾವುದೇ ದಸ್ತಾವೇಜೀಯ ಸಾಕ್ಷ್ಯವಿರಲಿಲ್ಲ ಮತ್ತು ಮೃತ ರುದ್ರೇಶನು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿದ್ದನೆಂದು ಸಹ ಸ್ಥಿರೀಕರಿಸಲಾಗಿತ್ತು ಎಂಬುದು ಅರ್ಜಿದಾರನ ಕ್ಲೇಮಾಗಿದೆ.

6. ಅರ್ಜಿದಾರನ ವಿರುದ್ಧದ ಸಂಗತಿಗಳನ್ನು ತೀರ್ಮಾನಿಸುವ ಸಲುವಾಗಿ ಸರ್ಕಾರವು, ಎನ್ಐಎಗೆ ಪ್ರಕರಣವನ್ನು ವಹಿಸಲು ಆದೇಶಿಸಿತು ಎಂದು ಮಾನ್ಯ ನ್ಯಾಯವಾದಿ ಶ್ರೀ ಎಸ್. ಬಾಲಕೃಷ್ಣನ್ ಅವರು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ ಅವರು, ರಾಷ್ಟ್ರೀಯ ತನಿಖಾ ಅಧಿನಿಯಮದ ಮತ್ತು ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967ರ ಅಡಿಯಲ್ಲಿನ ವಿವಿಧ ಪ್ರಕರಣಗಳನ್ನು, ಅರ್ಜಿದಾರನ ಮತ್ತು ಇತರರ ವಿರುದ್ಧ ವಿವೇಚನಾರಹಿತವಾಗಿ ಜಾರಿಗೊಳಿಸಲಾಗಿದೆ ಎಂದು; ಮೃತ ರುದ್ರೇಶನು ಆರ್.ಎಸ್.ಎಸ್. ಸದಸ್ಯನಾಗಿದ್ದನು ಅಥವಾ ಇನ್ನಾವುದೇ ರೀತಿಯಲ್ಲಿ "ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ" ಆರ್.ಎಸ್.ಎಸ್. ನಂಟು ಹೊಂದಿದ್ದನೆಂದು ತೋರಿಸಿಕೊಡಲು ಯಾವುದೇ ದಸ್ತಾವೇಜೀಯ ಸಾಕ್ಷ್ಯವಾಗಲಿ ಅಥವಾ ಮೌಖಿಕ ಸಾಕ್ಷ್ಯವಾಗಲಿ ಇಲ್ಲವೆಂದು; ಆರೋಪಗಳು ನೀರಸ ಮತ್ತು ಅಸ್ಪಷ್ಟವಾಗಿವೆ ಎಂದು ನಿವೇದಿಸಿಕೊಂಡಿದ್ದಾರೆ. ಆರೋಪ ಪಟ್ಟಿ ಮತ್ತು ಪ್ರಾಸಿಕ್ಯೂಷನ್‌ನ ಕ್ಲೇಮಿನ ಪ್ರಕಾರ ಸಹ, ಮೃತ

ರುದ್ರೇಶನು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿದ್ದನೆಂದು ಮಾನ್ಯ ನ್ಯಾಯವಾದಿಗಳು ಒತ್ತಿ ಹೇಳಿದ್ದಾರೆ.

ಸಿ.ಡಬ್ಲ್ಯು.1ರಿಂದ 53, 55ರಿಂದ 76, 78ರಿಂದ 86, 86ರಿಂದ 92, 94ರಿಂದ 96, 98ರಿಂದ 112 ಇವರು, ಅರ್ಜಿದಾರನ ವಿರುದ್ಧ ಯಾವುದೇ ಅಪರಾಧದಲ್ಲಿ ಸಿಕ್ಕಿಸುವ ಸಂದರ್ಭವನ್ನು ಹೇಳಿರುವುದಿಲ್ಲ ಎಂದು ಸಹ ನಿವೇದಿಸಿಕೊಂಡಿರುತ್ತಾರೆ.

7. ಮಾನ್ಯ ನ್ಯಾಯವಾದಿ ಶ್ರೀ ಎಸ್. ಬಾಲಕೃಷ್ಣನ್ ಅವರು, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಸಂಕ್ಷಿಪ್ತವಾಗಿ 'ಪಿಎಫ್ಐ') ಇದು ನಿಷೇಧಿತ ಸಂಘಟನೆಯಲ್ಲವೆಂದು ಮತ್ತು ಈ ಸಂಬಂಧದಲ್ಲಿ ಅವರು ವರದಿ ಮಾಡಿದ ***ಕೇರಳ ರಾಜ್ಯ –ವಿರುದ್ಧ– ರನೀಫ್***[1], ಮೊಕದ್ದಮೆಯಲ್ಲಿನ ಈ ಮುಂದಿನ ಉದ್ಧೃತ ಭಾಗದ ಮೇಲೆ ಅವಲಂಬಿಸಿರುವುದಾಗಿ ಆಗ್ರಹಪೂರ್ವಕವಾಗಿ ನಿವೇದಿಸಿಕೊಂಡಿದ್ದು, ಸದರಿ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ನಿರ್ಣಯಿಸಿದೆ:

> *"ಪ್ರಸ್ತುತ ಮೊಕದ್ದಮೆಯಲ್ಲಿ, ಪಿಎಫ್ಐ ಒಂದು ಭಯೋತ್ಪಾದಕ ಸಂಘಟನೆ ಎಂಬುದನ್ನು ಸಾಬೀತುಪಡಿಸಲು ಇದುವರೆಗೂ ಯಾವುದೇ ಸಾಕ್ಷ್ಯ ಇಲ್ಲ, ಮತ್ತು ಹಾಗಾಗಿ ಪ್ರತ್ಯರ್ಜಿದಾರರು ಪಿಎಫ್ಐಗೆ ಸೇರಿದ ಕಾರಣ ಮಾತ್ರದಿಂದ ಅವರನ್ನು ಶಿಕ್ಷಿಸಲಾಗುವುದಿಲ್ಲ"*

ಹಾಗಾಗಿ, ಅರ್ಜಿದಾರನ ಸದಸ್ಯತ್ವವನ್ನು ಪಿಎಫ್ಐ ಕಾರಣದಿಂದ ಮಾಡಲಾಗಿದೆ. ***ಅರೂಪ್ ಭೂಯಾನ್ –ವಿರುದ್ಧ– ಅಸ್ಸಾಮ್ ರಾಜ್ಯ***[2] ಮೊಕದ್ದಮೆಯಲ್ಲಿ ಮಾನ್ಯ ನ್ಯಾಯಾಧೀಶರು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದ್ದಾರೆ:

1. 2011(1) ಎಸ್‌ಸಿಸಿ 784
2. (2011) 1 ಎಸ್‌ಸಿಸಿ (ಕ್ರಿ) 855

*"ಎ. ಭಾರತ ಸಂವಿಧಾನ – ಅನುಚ್ಛೇದಗಳು 19(1)(ಸಿ) ಮತ್ತು (ಎ) ಹಾಗೂ 21 – ಸಂಘ–ಸಂಸ್ಥೆಗಳನ್ನು ರಚಿಸುವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು – ವ್ಯಾಪ್ತಿ – ನಿಷೇಧಿತ ಭಯೋತ್ಪಾದಕ ಸಂಘಟನೆಯ ಸದಸ್ಯತ್ವ – ಅದರಿಂದ ಊಹೆ – ನಿಷೇಧಿತ ಸಂಘಟನೆಯ ಸದಸ್ಯತ್ವ ಮಾತ್ರದಿಂದ ವ್ಯಕ್ತಿಯೊಬ್ಬನನ್ನು, ಅನ್ಯಥಾ ಆತನು ಹಿಂಸೆಗೆ ಜನರನ್ನು ಸೇರಿಸಿದ ಅಥವಾ ಪ್ರೇರೇಪಿಸಿದ ಅಥವಾ ಹಿಂಸೆಯ ಮೂಲಕ ಸಾರ್ವಜನಿಕ ಗಲಭೆ ಉಂಟು ಮಾಡಿದ ಅಥವಾ ಹಿಂಸೆಗೆ ಪ್ರಚೋದಿಸಿದ ಹೊರತು ಅಪರಾಧಿಯನ್ನಾಗಿಸುವುದಿಲ್ಲ – ಭಯೋತ್ಪಾದಕ ಮತ್ತು ವಿಧ್ವಂಸಕ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1987 – ಪ್ರಕರಣ 3(5) – ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967, ಪ್ರಕರಣ 10."*

8. ಪಿಎಫ್ಐ ಸಂಘಟನೆಗೆ ಸಂಬಂಧಿಸಿದ ಕೆಲವು ಮುದ್ರಿತ ಅಥವಾ ಸಾಫ್ಟ್ ಸಾಕ್ಷ್ಯಗಳನ್ನು ಸಾರ್ವಜನಿಕ ಸ್ಥಳದಿಂದ ಪಡೆದುಕೊಂಡ ಸಂಗತಿ ಮಾತ್ರದಿಂದ, ಅರ್ಜಿದಾರನು ನಿಷೇಧಿತ ಸಂಘಟನೆಯ ಸಕ್ರೀಯ ಸದಸ್ಯನಾಗಿರುವನೆಂದು ಸಾಬೀತುಪಡಿಸಿದಂತಾಗುವುದಿಲ್ಲ ಎಂದು ಸಹ ನಿವೇದಿಸಿಕೊಳ್ಳಲಾಗಿದೆ.

ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು, ಪೊಲೀಸರಾಗಲಿ ಅಥವಾ ಎನ್ಐಎ ಆಗಲಿ, ಪ್ರಕರಣವನ್ನು ದಾಖಲಿಸಲು ಯಾವುದೇ ಸಾಕ್ಷ್ಯವನ್ನು ಹೊಂದಿರುವುದಿಲ್ಲ ಹಾಗೂ ಸದರಿ ಸಂಘಟನೆಗೆ ಉದ್ದೇಶ ಮತ್ತು ದ್ರೋಹವನ್ನು ಆರೋಪಿಸಿದ್ದಾರೆಂದು ನಿವೇದಿಸಿಕೊಂಡಿದ್ದಾರೆ.

ಈ ಸಂಬಂಧದಲ್ಲಿ, ಕಾನೂನುಬಾಹಿರ ಕಾರ್ಯಚಟುವಟಿಕೆಗಳ ಅಧಿನಿಯಮದ 20ನೇ ಮತ್ತು 38ನೇ ಪ್ರಕರಣವನ್ನು ಪುನರುಚ್ಚರಿಸುವುದು ಅಗತ್ಯವಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

*"ಪ್ರಕರಣ 20 – ಭಯೋತ್ಪಾದಕ ಗುಂಪಿನ ಅಥವಾ ಸಂಘಟನೆಯ ಸದಸ್ಯರಾಗಿರುವುದಕ್ಕೆ ದಂಡನೆ – ಭಯೋತ್ಪಾದಕ ಕೃತ್ಯದಲ್ಲಿ ತೊಡಗಿಕೊಂಡಿರುವ ಭಯೋತ್ಪಾದಕ ಗುಂಪಿನ ಅಥವಾ ಭಯೋತ್ಪಾದಕ ಸಂಘಟನೆಯ ಸದಸ್ಯನಾಗಿರುವ ಯಾರೇ ವ್ಯಕ್ತಿಯು, ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾಗಿರುವ ಅವಧಿಗಾಗಿ ಸೆರೆವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೆ ಸಹ ಗುರಿಯಾಗತಕ್ಕದ್ದು.*

*ಪ್ರಕರಣ 38(1) – ಭಯೋತ್ಪಾದಕ ಸಂಘಟನೆಯ ಕಾರ್ಯಚಟುವಟಿಕೆಗಳನ್ನು ಮುಂದುವರಿಸುವ ಉದ್ದೇಶದಿಂದ, ಅದರೊಂದಿಗೆ ಸ್ವತಃ ಸಂಬಂಧ ಹೊಂದಿರುವ ಅಥವಾ ಅದರೊಂದಿಗೆ ಸಂಬಂಧ ಹೊಂದಿರುವುದಾಗಿ ಹೇಳುವ, ಭಯೋತ್ಪಾದಕ ಸಂಘಟನೆಯ ಸದಸ್ಯತ್ವಕ್ಕೆ ಸಂಬಂಧಿಸಿದ ಅಪರಾಧವನ್ನು ಎಸಗುವ ವ್ಯಕ್ತಿ;*

*ಪರಂತು, ಆರೋಪ ಹೊತ್ತಿರುವ ವ್ಯಕ್ತಿಯು,–*

*(ಎ) ಸಂಘಟನೆಯು, ತಾನು ಸದಸ್ಯನಾಗಿದ್ದ ಸಮಯದಲ್ಲಿ ಭಯೋತ್ಪಾದಕ ಸಂಘಟನೆಯಾಗಿ ಘೋಷಿತವಾಗಿರಲಿಲ್ಲ ಅಥವಾ ಸದಸ್ಯನಾಗಿರಲು ಪ್ರಾರಂಭಿಸಿರಲಿಲ್ಲವೆಂದು; ಮತ್ತು*

*(ಬಿ) (1)ನೇ ಉಪ–ಪ್ರಕರಣದ ಅಡಿಯಲ್ಲಿ ಭಯೋತ್ಪಾದಕ ಸಂಘಟನೆಯಾಗಿ ಅನುಸೂಚಿಯಲ್ಲಿ ಅದು ಸೇರ್ಪಡೆಯಾದ ಅವಧಿಯಲ್ಲಿ ಯಾವುದೇ ಸಮಯದಲ್ಲಿ ಸಂಘಟನೆಯು ಕಾರ್ಯಚಟುವಟಿಕೆಗಳಲ್ಲಿ ತಾನು ಭಾಗವಹಿಸಿರಲಿಲ್ಲವೆಂದು*

*– ಸಾಬೀತುಪಡಿಸಲು ಶಕ್ತನಾದಲ್ಲಿ, ಈ ಉಪ–ಪ್ರಕರಣವು ಅನ್ವಯವಾಗತಕ್ಕದ್ದಲ್ಲ.*

---

9. ಸದರಿ ಅಪರಾಧಗಳಿಗೆ ಸಂಬಂಧಿಸಿದ ಕಾನೂನಿನ ಯಾವುದೇ ಅಂಶವಾಗಲಿ ಅಥವಾ ಉಪಬಂಧಗಳಾಗಲಿ ಆರೋಪ ಪಟ್ಟಿಯಲ್ಲಿ ಕಂಡುಬರುವುದಿಲ್ಲ ಅಥವಾ ಅದರಲ್ಲಿ ಸೂಚಿಸಿಲ್ಲವೆಂದು ಮಾನ್ಯ ನ್ಯಾಯವಾದಿಯು ಹೇಳಿದ್ದಾರೆ. ಈ ಸಂಬಂಧದಲ್ಲಿ ಹೊರಡಿಸಿದ ಮಂಜೂರಾತಿ ಆದೇಶವು ಸಿಂಧುವಾಗಿಲ್ಲವೆಂದು ಅರ್ಜಿದಾರನು ಸಹ ಕ್ಲೇಮು ಮಾಡಿದ್ದಾನೆ. ಹಾಗಾಗಿ, ಮಾನ್ಯ ನ್ಯಾಯವಾದಿಯ ಪ್ರಕಾರ, ಪ್ರಾಸಿಕ್ಯೂಷನ್‌ರವರು ಸನ್ನಿವೇಶವನ್ನು ವೈಭವೀಕರಿಸಿದ್ದಾರೆ ಮತ್ತು ಮಾನ್ಯ 47ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ನ್ಯಾಯಾಧೀಶರು, ಎನ್‌ಐಎ ವಿಶೇಷ ನ್ಯಾಯಾಲಯ, ಬೆಂಗಳೂರು ಇವರ ಕಡತದಲ್ಲಿನ ಸದರಿ ಅಪರಾಧ ಸಂಖ್ಯೆಯಲ್ಲಿ, ಅರ್ಜಿದಾರನನ್ನು ಆರೋಪಿಯೆಂದು ಕರೆಯಲು ಯಾವುವೇ ಕಾರಣಗಳಿಲ್ಲ.

10. ಪ್ರತ್ಯರ್ಜಿದಾರ–ಎನ್‌ಐಎ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀ ಪಿ. ಪ್ರಸನ್ನ ಕುಮಾರ್ ಅವರು, ಅರ್ಜಿದಾರನ ವಿರುದ್ಧ ದಾಖಲಿಸಿದ ಮೊಕದ್ದಮೆಯಲ್ಲಿ ಹೇಳಲಾದ ಕಾನೂನಿನ ಉಪಬಂಧಗಳ ಎಲ್ಲಾ ಅಗತ್ಯತೆಗಳನ್ನು ಅರ್ಜಿದಾರನು ಈಡೇರಿಸಿದ್ದಾನೆಂದು ನಿವೇದಿಸಿಕೊಂಡಿದ್ದಾರೆ. ಅಲ್ಲದೆ ಅವರು, ಅರ್ಜಿದಾರನ ವಿಮೋಚನೆಗೆ ಅರ್ಜಿ ಸಲ್ಲಿಸುವ ಮೂಲಕ ಆತನಿಗೆ ದೊರಕುವ ಪರಿಹಾರವನ್ನು ಸಹ ಸಂಪೂರ್ಣವಾಗಿ ಬಳಸಿಕೊಂಡಿದ್ದಾನೆಂದು ನಿವೇದಿಸಿಕೊಂಡಿದ್ದಾರೆ. ಆದಾಗ್ಯೂ, ಅದನ್ನು ತಳ್ಳಿಹಾಕಲಾಗಿದೆ. ಪ್ರಾರಂಭದಲ್ಲಿ, ಕಮರ್ಷಿಯಲ್ ರಸ್ತೆ ಪೊಲೀಸ್‌ರು ಸಂಗ್ರಹಿಸಿದ ಸಾಕ್ಷ್ಯವನ್ನು ಮತ್ತು ತರುವಾಯದಲ್ಲಿ ಎನ್‌ಐಎ ತೋರಿಸಿದ ಐವರು ಆರೋಪಿತ ವ್ಯಕ್ತಿಗಳು ಪಿಎಫ್‌ಐನ ಸದಸ್ಯರಾಗಿದ್ದಾರೆ ಮತ್ತು ಅವರಿಂದ ಜಪ್ತಿ ಮಾಡಿದ ಅಪರಾಧದಲ್ಲಿ ಸಿಕ್ಕಿಸುವ ಸಾಕ್ಷ್ಯಗಳು ಅವರ ಅಪರಾಧದ ಉದ್ದೇಶವನ್ನು ಎರಡರಷ್ಟು ಸ್ಥಿರೀಕರಿಸಿವೆ.

11. ಮೊದಲನೆಯದಾಗಿ, ದಿನಾಂಕ: 16.10.2017ರಂದು ಸಮವಸ್ತ್ರದಲ್ಲಿದ್ದ ಆರ್.ಎಸ್.ಎಸ್.ನ ಸಕ್ರಿಯ ಸದಸ್ಯನನ್ನು ಆರೋಪಿತ ವ್ಯಕ್ತಿಗಳು ಹತ್ಯೆಗೈದಿದ್ದಾರೆ ಮತ್ತು ಮಾರಕ ಆಯುಧವನ್ನು ಬಳಸಿದ್ದಾರೆ. ಆರೋಪಿಯ ಭಾವಚಿತ್ರವನ್ನು ಒಳಗೊಂಡಿರುವ ಎಸ್‌ಡಿಪಿಐನ ಬ್ಯಾನರ್‌ಅನ್ನು ಸಹ ಜಪ್ತಿ ಮಾಡಲಾಗಿದೆ.

ಇದಲ್ಲದೆ, 2016ರ ಸೆಪ್ಟಂಬರ್ ತಿಂಗಳಿನಲ್ಲಿ ಅಕ್ಸಾ ಮಸೀದಿಯ ಮತ್ತು ಚೋಟಾ ಚಾರ್‌ಮಿನಾರ್ ಬಳಿ ಆರೋಪಿ–ಅರ್ಜಿದಾರನು ಭಯೋತ್ಪಾದಕ ಕೃತ್ಯವನ್ನು ಎಸಗುವ ಮುಂಚೆ ಕೆಲವು ಸಭೆಗಳನ್ನು ನಡೆಸಿದ್ದನು ಎಂದು ಕಂಡುಬರುವ ಪ್ರಬಲ ಸಾಕ್ಷ್ಯ ಮತ್ತು ರುಜುವಾತುಗಳಿವೆ ಎಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ. ತನಿಖೆಯ ಪ್ರಕಟಣೆಯು, ಇದರಲ್ಲಿನ ಅರ್ಜಿದಾರನಾಗಿರುವ ಆರೋಪಿ ಸಂಖ್ಯೆ 5 ಈತನು ಭಯೋತ್ಪಾದಕ ಕಾರ್ಯಚಟುವಟಿಕೆಗಳಲ್ಲಿ ತೊಡಗಲು ಮತ್ತು ಅದರಲ್ಲಿ ಮುಂದುವರಿಯಲು ಇತರ ಆರೋಪಿತ ವ್ಯಕ್ತಿಗಳಿಗೆ ಸೂಚನೆ ನೀಡಿದ್ದಾನೆ ಮತ್ತು ಅವರ ಮನಸ್ಸಿನ ಮೇಲೆ ಒತ್ತಡ ಹೇರಿದ್ದಾನೆ. ಘಟನೆ ಜರುಗುವ ಎಂಟರಿಂದ ಒಂಭತ್ತು ತಿಂಗಳುಗಳ ಮೊದಲೇ ಅರ್ಜಿದಾರನನ್ನು ಒಳಗೊಂಡ ಆರೋಪಿತ ವ್ಯಕ್ತಿಗಳು ವೈಟ್‌ಫೀಲ್ಡ್, ಬೆಂಗಳೂರು ಇಲ್ಲಿ ಎಸ್‌ಡಿಪಿಐ ಮುಖ್ಯಸ್ಥನಾಗಿ ಗುರುತಿಸಲ್ಪಟ್ಟಿರುವ ಅಬ್ದುಲ್ ಅಬ್ದು ರಹೀಮಾನ್ ನಡೆಸಿದ ಸೂಚನಾ ತರಗತಿಗಳಿಗೆ ಹಾಜರಾಗಿದ್ದಾರೆ.

12. ಇದಲ್ಲದೆ, ಅರ್ಜಿದಾರನು ನಡೆಸುವ ತರಗತಿಗಳಲ್ಲಿ, ಮುಜಾಫರ್‌ನಗರ್ ಕೋಮು ಗಲಬೆಯು ಘಟನೆಗಳನ್ನು ಮತ್ತು ಬಾಬ್ರಿ ಘಟನೆಗಳನ್ನು ತೋರಿಸಲಾಗುತ್ತಿತ್ತು; ಆರ್.ಎಸ್.ಎಸ್. ವಿರುದ್ಧ ಘೋಷಣೆಗಳನ್ನು ಕೂಗಲಾಗುತ್ತಿತ್ತು; ಆರ್.ಎಸ್.ಎಸ್. ಸದಸ್ಯರನ್ನು ಕೊಲ್ಲುವುದನ್ನು ಒಳಗೊಂಡು ಅರ್ಜಿದಾರನು ಮತ್ತು ಇತರರು ತೋರಿಸಿದ ಉದಾಹರಣೆಗಳು, ಹಿಂದತ್ವದೆಡೆಗಿನ ಅವರ ದ್ವೇಷವನ್ನು ಮತ್ತು ಅವರ ತೀವ್ರಗಾಮಿ ಮಾರ್ಗವನ್ನು ತೋರಿಸುತ್ತದೆ ಎಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿದ್ದಾರೆ. 'ಕಾಫಿರ'ರ (ನಾಸ್ತಿಕರ) ಕೃತ್ಯಗಳೆಲ್ಲವು 'ಜಿಹಾದ್'ನ ಭಾಗವಾಗಿವೆ ಎಂದು ಮತ್ತು ಸರ್ವಶಕ್ತನಾದ ಅಲ್ಲಾನು ಅವರನ್ನು ಆಶೀರ್ವದಿಸುವನೆಂದು ಅರ್ಜಿದಾರರು ಜನರನ್ನು ಪ್ರೇರೇಪಿಸಿ ತೀವ್ರಗಾಮಿಗಳನ್ನಾಗಿಸುತ್ತಿರುವರು; ಇಸ್ಲಾಮ್ ಧರ್ಮವನ್ನು ಸ್ಥಾಪಿಸುವ ಮತ್ತು ನಾಸ್ತಿಕರನ್ನು ಕೊಲ್ಲುವ ಉದ್ದೇಶಗಳನ್ನು ಈಡೇರಿಸುವ ಭಾಗವಾಗಿ ಅವರು ಈ ಕೃತ್ಯವನ್ನು ಎಸಗಿದ್ದರೆಂದು ಅವರನ್ನು ನಂಬುವಂತೆ ಮಾಡುವ ಸಲುವಾಗಿ, ಸದಸ್ಯರನ್ನು ನೇಮಿಸಿಕೊಳ್ಳುತ್ತಿರುವುದನ್ನು ತೋರಿಸಲಾಗಿದೆ ಎಂದು ಸಹ ಹೇಳಲಾಗಿದೆ. ಸ್ವತಂತ್ರ

ಸಾಕ್ಷಿಗಳು ಸಹ ಅರ್ಜಿದಾರನ ಸಮಾಜ–ವಿರೋಧಿ ಕೃತ್ಯದ ಬಗ್ಗೆ ಹೇಳಿಕೆ ನೀಡಿದ್ದಾರೆ; ಅರ್ಜಿದಾರ ಮತ್ತು ಇತರ ಆರೋಪಿಗಳು ಅವರ ಮೋಟಾರು ಸೈಕಲ್‌ಗಳಿಗೆ ಬಳಸಿದ ನೋಂದಾಯಿತ ಸಂಖ್ಯೆಗಳು ನಕಲಿಯಾಗಿವೆ; ಹಾಗಾಗಿ ಅರ್ಜಿದಾರನ ಯೋಜನೆಗಳಲ್ಲಿ ಹೇಯ ಮತ್ತು ಸಮಾಜ ವಿರೋಧಿ ಚಟುವಟಿಕೆಗಳನ್ನು ಎಸಗುವುದು ಸಹ ಒಂದು ಯೋಜನೆ ಆಗಿತ್ತೆಂದು ನಿವೇದಿಸಿಕೊಂಡಿದ್ದಾರೆ.

13. ಕೃತ್ಯ ನಡೆದ ಸ್ಥಳದ ಬಳಿ 1ರಿಂದ 4ರವರೆಗಿನ ಆರೋಪಿಗಳು ಸೇರಿರುವುದರ ಸಿಸಿಟಿವಿ ವಿಡಿಯೋ ತುಣುಕುಗಳು (ಫೂಟೇಜ್) ಮತ್ತು ಸಿಸಿಟಿವಿ ವಿಡಿಯೋ ತುಣುಕುಗಳ (ಫೂಟೇಜ್) ವಿಶ್ಲೇಷಣೆಗಳು ಆರೋಪ ಪಟ್ಟಿಯ ಭಾಗವಾಗಿವೆ ಎಂದು ಎನ್‌ಐಎ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿದ್ದಾರೆ.

ಮಚ್ಚಿನಿಂದ ರುದ್ರೇಶನ ಮೇಲೆ ದಾಳಿ ಮಾಡುವಾಗ, ಆರೋಪಿ ಸಂಖ್ಯೆ 2 ಈತನು "ಚಿನಾಲಿಕೆ, ಕಾಫಿರ್", ಎಂದರೆ "ಸೂಳೆ ಮಗನೆ, ನಾಸ್ತಿಕ" ಎಂದು ಕೂಗಿದ್ದನು; ಆ ದಿನಾಂಕದಂದು ಅರ್ಜಿದಾರ ಮತ್ತು ಇತರರ ಉದ್ದೇಶವು ತೋರಿಸುವುದೇನೆಂದರೆ, ನಿರ್ದಿಷ್ಟ ವರ್ಗದ ಜನರನ್ನು ಹೆದರಿಸುವುದು ಮತ್ತು ಅವರ ಮೇಲೆ ದಾಳಿ ಮಾಡುವುದಾಗಿತ್ತು; ಮಾರಕ ಆಯುಧಗಳ ಬಳಕೆಯು, ಅವರ ಸ್ವೇಚ್ಛೆಯಾದ ಭಯೋತ್ಪಾದಕ ಕೃತ್ಯವನ್ನು ತೋರಿಸುತ್ತದೆ ಎಂದು ಸಹ ನಿವೇದಿಸಿಕೊಳ್ಳಲಾಗಿದೆ. ಇದಲ್ಲದೆ, ಸಿ.ಡಬ್ಲ್ಯು.1 ಒಳಗೊಂಡು ಸಾಕ್ಷಿದಾರರ ಹೇಳಿಕೆಯು, ಅರ್ಜಿದಾರನು ಸಂಘಟನೆಯ ಹೆಸರಿನಲ್ಲಿ ಸಮಾಜದ ವಿರುದ್ಧ ಯುದ್ಧ ಸಾರಿದ್ದಾರೆಂಬುದನ್ನು ಪ್ರಕಟಪಡಿಸುತ್ತದೆ; ಎಸ್‌ಎಫ್‌ಎಸ್‌ಎಲ್, ಮಡಿವಾಳದಿಂದ ಪಡೆದ ವಿಧಿವಿಜ್ಞಾನ ಪರೀಕ್ಷೆಯ ವರದಿಯು, ಪ್ರಾಸಿಕ್ಯೂಷನ್‌ನ ನಿಲುವನ್ನು ಪುಷ್ಟೀಕರಿಸುತ್ತದೆ ಎಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.

14. ಅರ್ಜಿದಾರ ಮತ್ತು ಇತರರು "ಮಡಿಕೇರಿ ಜೈಲ್" ಕುರಿತು ಸಹ ಮಾತನಾಡಿದ್ದರು ಮತ್ತು ಕೊಡಗಿನಲ್ಲಿನ ಪಿಎಫ್‌ಐ ಸಹೋದರರು ಮಡಿಕೇರಿ ಜೈಲಿನಲ್ಲಿದ್ದು, "ಇನ್‌ಷಾ ಅಲ್ಲಾಹ್ ಯತವುನ್ ಫೀತನ್ ಮುಜೀಫಿಕನ್ ಷರ್ಮಿಕಾ

ಕುನ್ ಫಲರ್‌ತಿಕುಕಾ" ಎಂದು ಓದಲಾದ ಸಂದೇಶವು ಸಹ ಇದೆ, ಅದರರ್ಥ ಜೈಲಿನಿಂದ ಅವರ ಶೀಘ್ರ ಬಿಡುಗಡೆಗಾಗಿ ದೇವರನ್ನು ಪ್ರಾರ್ಥಿಸಿ ಎಂದಾಗಿದೆ.

15. ಆರ್‌ಎಫ್‌ಎಸ್‌ಎಲ್, ಮೈಸೂರು ಇವರಿಂದ ನೋಂದಾಯಿತ ಸಂಖ್ಯೆ: ಆರ್‌ಎಫ್‌ಎಸ್‌ಎಲ್ (ಎಮ್‌ವೈ)/4206/2016 ಆಗಿ ಸ್ವೀಕರಿಸಿದ ವಿಧಿವಿಜ್ಞಾನ ಪರೀಕ್ಷಾ ವರದಿಯು, ವಶಪಡಿಸಿಕೊಳ್ಳಲಾದ ವಸ್ತುಗಳ ಮಹಜರ್ ಪ್ರಕಾರ ಮಚ್ಚಿನಲ್ಲಿ ಅಂಟಿದ್ದ "ಒ" ಗುಂಪಿನ ಮಾನವ ರಕ್ತವು, ಆರೋಪಿ ಸಂಖ್ಯೆ 2 ಈತನಿಂದ ವಶಪಡಿಸಿಕೊಂಡ ಮಂಕಿ ಕ್ಯಾಪ್ ಮತ್ತು ಅಂಗಿಯ ಮೇಲೆ ಇದ್ದದ್ದನ್ನು ಬಹಿರಂಗಪಡಿಸುತ್ತದೆ ಎಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ. ಹಾಗಾಗಿ, "ಒ" ಗುಂಪಿನ ಮಾನವ ರಕ್ತದ ಮಾದರಿಗಳು, ದೂರುದಾರರು ಹಾಜರುಪಡಿಸಿದ ಗಾಢ ಬಣ್ಣದ ಚೀಲ ಸಿಡಿಆರ್‌ದಿಂದ ಸಹ ಕಂಡುಬಂದಿದ್ದು, ಅವುಗಳನ್ನು ಸಂಖ್ಯೆ: 75, 76 ಮತ್ತು 77 ಎಂದು ಗುರುತಿಸಲಾಗಿದೆ.

16. ಮಾನ್ಯ ನ್ಯಾಯವಾದಿ ಶ್ರೀ ಪ್ರಸನ್ನ ಕುಮಾರ್ ಅವರು, ಪ್ರಾರಂಭದಲ್ಲಿ ಅಪರಿಚಿತ ವ್ಯಕ್ತಿಯ ಮೇಲೆ ಪ್ರಕರಣವನ್ನು ದಾಖಲಿಸಲಾಗಿತ್ತು ಮತ್ತು ಇದರಲ್ಲಿನ ಅರ್ಜಿದಾರನ ಹೆಸರು ಪ್ರಥಮ ಮಾಹಿತಿಯಲ್ಲಿ ಕಂಡುಬಂದಿತ್ತೆಂದು ನಿವೇದಿಸಿಕೊಂಡಿದ್ದಾರೆ. ರಿಟ್ ಅರ್ಜಿ ಸಂಖ್ಯೆ: 6005/2017ನ್ನು ವಿಲೆ ಮಾಡುವಾಗ, ಈ ನ್ಯಾಯಾಲಯವು ನೀಡಿದ ಅಭಿಪ್ರಾಯವನ್ನು ಸಹ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ್ದಾರೆ.

17. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿ ಶ್ರೀ ಎಸ್. ಬಾಲಕೃಷ್ಣನ್ ಅವರು ಈ ಮುಂದಿನ ತೀರ್ಪುಗಳನ್ನವಲಂಬಿಸಿದ್ದಾರೆ:

1. ಎಐಆರ್ 2017 ಎಸ್‌ಸಿ 3035
2. ಎಐಆರ್ 2011 ಎಸ್‌ಸಿ 340
3. ಎಐಆರ್ 2011 ಎಸ್‌ಸಿ 957

4. ಎಐಆರ್ 1979 ಎಸ್‌ಸಿ 366
5. ಎಐಆರ್ 1994 ಎಸ್‌ಸಿ 2623

18. ಮೊಕದ್ದಮೆಯ ಸಂದರ್ಭ ಮತ್ತು ಸನ್ನಿವೇಶಗಳ ಹಿನ್ನಲೆಯಲ್ಲಿ, ದಸ್ತಗಿರಿ ಮಾಡುವುದಕ್ಕೆ ಯಾವುದೇ ಕಾರಣವಿರಲಿಲ್ಲ ಮತ್ತು ದೂರುದಾರ ಹಾಗೂ ಪ್ರಾಸಿಕ್ಯೂಷನ್ ಇವರು, ಅರ್ಜಿದಾರನನ್ನು ಮತ್ತು ಇತರ ಆರೋಪಿತ ವ್ಯಕ್ತಿಗಳನ್ನು ಆರೋಪದ ಗುಂಡಿಯಲ್ಲಿ ತಳ್ಳುವಲ್ಲಿ ಹಾಗೂ ಅವರನ್ನು ಭಯೋತ್ಪಾದಕರೆಂಬುದಾಗಿ ಬಿಂಬಿಸುವಲ್ಲಿ ಪೂರ್ವಾಗ್ರಹಿತರಾಗಿದ್ದಾರೆ ಮತ್ತು ಪಕ್ಷಪಾತವುಳ್ಳವರಾಗಿದ್ದಾರೆ ಎಂಬುದು ಅರ್ಜಿದಾರನ ವಾದವಾಗಿದೆ. ಪ್ರಾರಂಭದಲ್ಲಿ, ಕರ್ನಾಟಕ ರಾಜ್ಯ ಪೋಲೀಸರು ಭಾರತ ದಂಡ ಸಂಹಿತೆಯ 302ನೇ ಮತ್ತು 34ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ, ಅಪರಾಧ ಪ್ರಕರಣವನ್ನು ಅಪರಾಧ (ಕ್ರಿಮಿನಲ್) ಸಂಖ್ಯೆ: 124/2016ರಲ್ಲಿ ದಾಖಲಿಸಿತ್ತೆಂದು; ತರುವಾಯದ ಸಂದರ್ಭದಲ್ಲಿ, ವಿಷಯವನ್ನು ಎನ್‌ಐಎ ಸಂಸ್ಥೆಗೆ ವಹಿಸಲಾಗಿತ್ತು; ಆದ್ದರಿಂದ ಸ್ಥಳೀಯ ಪೋಲೀಸರು, ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾಗುವ 302ನೇ ಪ್ರಕರಣದ ಅಡಿಯಲ್ಲಿ ಹಾಗೂ 109, 120ಬಿ, 150, 153ಎ ಮತ್ತು 201 ಈ ಪ್ರಕರಣಗಳ ಅಡಿಯಲ್ಲಿ, ಇದಲ್ಲದೆ ಆಯುಧಗಳ ಅಧಿನಿಯಮ, 1959ರ 3ನೇ ಮತ್ತು 27ನೇ ಪ್ರಕರಣಗಳ ಅಡಿಯಲ್ಲಿ ಹಾಗೂ ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967ರ 15, 16, 17, 18 ಮತ್ತು 20 ಈ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ ಪ್ರಕರಣ ಸಂಖ್ಯೆ: ಆರ್‌ಸಿ–04/2016/ ಎನ್‌ಐಎ/ಹೆಚ್‌ವೈಡಿಯಲ್ಲಿ ಎನ್‌ಐಎ ಪುನಃ ಪ್ರಕರಣವನ್ನು ಮರು–ದಾಖಲಿಸಿತ್ತೆಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.

19. ಸಾಬೀತಾದ ಸಹಜ ನ್ಯಾಯ ತತ್ವಗಳಿಗೆ ಮತ್ತು ನ್ಯಾಯಯುತ ವ್ಯವಹರಣೆಗಳಿಗೆ ಗೌರವ ನೀಡಿ ವಿಚಾರಣೆ ನಡೆಸುವ ಅವಧಿಯಲ್ಲಿ ವಿಷಯಗಳನ್ನು ಕುರಿತು ನ್ಯಾಯ ನಿರ್ಣಯಿಸಲಾಗಿದೆ. ಈ ಸಂದರ್ಭಗಳ ಹಿನ್ನಲೆಯಲ್ಲಿ, ಪೂರ್ವಾಗ್ರಹವನ್ನು ಅಥವಾ ಎನ್‌ಐಎ ಮಾಡಿದ ತನಿಖೆಯು ಉಂಟು ಮಾಡಿದ ನೇರ ಅಥವಾ ಪರೋಕ್ಷ ನಷ್ಟವನ್ನು ಸಾಬೀತುಪಡಿಸುವುದು ಅರ್ಜಿದಾರನಿಗೆ ಸಂಬಂಧಿಸಿದ ವಿಷಯವಾಗಿದೆ.

ಪ್ರಕರಣವನ್ನು ತೆಗೆದುಕೊಂಡಾಗ ಮತ್ತು ಪ್ರಕರಣವನ್ನು ಮರು-ದಾಖಲಿಸಿದಾಗ, ಅದು ಮತ್ತೇನೂ ಅಲ್ಲದೆ, ಕಮರ್ಷಿಯಲ್ ರಸ್ತೆ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 124/2016ರಲ್ಲಿ ದಾಖಲಿಸಿದಂತಹುದೇ ಪ್ರಕರಣವಾಗಿದೆ. ಎನ್ಐಎ ಇದಕ್ಕೆ ತನಿಖೆಯನ್ನು ಹಸ್ತಾಂತರಿಸಲು ಸರ್ಕಾರವು ತೀರ್ಮಾನ ತೆಗೆದುಕೊಂಡಿತು. ದಿನಾಂಕ: 19.04.2017ರಂದು ಸರ್ಕಾರವು ಈ ಸಂಬಂಧದಲ್ಲಿ ಆದೇಶವನ್ನು ಹೊರಡಿಸಿದ್ದು, ಅದರಲ್ಲಿ, ಭಾರತ ಸರ್ಕಾರದ ಅಧೀನದಲ್ಲಿ ಬರುವ ಮಾನವ ವ್ಯವಹಾರಗಳ ಮಂತ್ರಾಲಯದ ಆಂತರಿಕ ಭದ್ರತಾ ವಿಭಾಗವು, ಮೊದಲ ನೋಟದಲ್ಲೇ ಪ್ರಕರಣವನ್ನು ಆರೋಪಿಯ ವಿರುದ್ಧ ಮಾಡಲಾಗಿದೆ ಎಂದು ಹೇಳಿ ಆದೇಶವನ್ನು ಹೊರಡಿಸಿದೆ. ಆದ್ದರಿಂದ, ಮಂಜೂರಾತಿಯನ್ನು ನೀಡಲಾಗಿದೆ.

ವಿವರಗಳು ಈ ಕೆಳಗಿನಂತಿವೆ:

| **ಆರೋಪಿ** | **ಆರೋಪಿಯ ಹೆಸರು** | **ಪ್ರಾಸಿಕ್ಯೂಷನ್‌ಗೆ ಮಂಜೂರಾತಿ ನೀಡಲಾಗಿರುವ ಕಾನೂನಿನ ಪ್ರಕರಣಗಳು** |
|---|---|---|
| ಎ-1 | ಇರ್ಫಾನ್ ಪಾಷಾ | ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮದ 16(1)(ಎ), 18 ಮತ್ತು 20ನೇ ಪ್ರಕರಣಗಳು |
| ಎ-2 | ವಾಸೀಮ ಅಹ್ಮದ್ | ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮದ 16(1)(ಎ), 18 ಮತ್ತು 20ನೇ ಪ್ರಕರಣಗಳು |

| | | |
|---|---|---|
| ಎ–3 | ಮೊಹಮ್ಮದ್ ಸಾದಿಕ್ ಮತ್ತು ಮೊಹಮ್ಮದ್ ಮಜ಼ರ್ @ಮಜ಼ರ್ | ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮದ 16(1)(ಎ), 18 ಮತ್ತು 20ನೇ ಪ್ರಕರಣಗಳು |
| ಎ–4 | ಮೊಹಮ್ಮದ್ ಮಜೀಬ್ ಉಲ್ಲಾ @ ಮುಜೀಬ್ ಮೌಲಾ | ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮದ 16(1)(ಎ), 18 ಮತ್ತು 20ನೇ ಪ್ರಕರಣಗಳು |
| ಎ–5 | ಅಸೀಮ್ ಷರೀಫ್ | ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮದ 16(1)(ಎ), 18 ಮತ್ತು 20ನೇ ಪ್ರಕರಣಗಳು |

20. ಹಾಗಾಗಿ, ಅಗತ್ಯವಾಗಿರುವಂಥ ಮಂಜೂರಾತಿ ಆದೇಶವನ್ನು ಸಕ್ಷಮ ಪ್ರಾಧಿಕಾರಿಗಳಾದ ಭಾರತದ ಘನ ರಾಷ್ಟ್ರಾಧ್ಯಕ್ಷರು ಹೊರಡಿಸಿದ್ದರು. ಆರೋಪಿಸಲಾದ ಅಪರಾಧಗಳಿಂದ ಮತ್ತು ಕಾನೂನಿನ ಯಾವುವೇ ಉಪಬಂಧಗಳ ಅಡಿಯಲ್ಲಿ ಯಾವುದೇ ಏಜನ್ಸಿಯು ಸಲ್ಲಿಸಿದ ಅಂತಿಮ ವರದಿಯಿಂದ, ಪ್ರಕರಣವನ್ನು ಅಂತಿಮವಾಗಿ ನ್ಯಾಯ ನಿರ್ಣಯಿಸಲಾಗಿದೆಯೆಂದು ಧ್ವನಿತವಾಗುವುದಿಲ್ಲ. ಇನ್ನೊಂದೆಡೆ, ತನಿಖೆ ನಡೆಸಲು ನಿಶ್ಚಿತ ಕಾರಣಗಳಿದ್ದವೆಂಬುದು ತಿಳಿದುಕೊಳ್ಳುವುದಕ್ಕಾಗಿ ದಾರಿ ಮಾಡಿಕೊಟ್ಟಿರುವ ಸಂಗತಿಗಳಿವೆ ಮತ್ತು ಆರೋಪಿತ ವ್ಯಕ್ತಿಗಳು ಸದರಿ ಅಪರಾಧಗಳನ್ನು ಎಸಗಿದ್ದರೆಂದು ಪ್ರಾಸಿಕ್ಯೂಷನ್ ಕ್ಲೇಮು ಮಾಡಿದೆ. ಆರೋಪ ಪಟ್ಟಿಯನ್ನು ಸಲ್ಲಿಸಿದ ತಕ್ಷಣವೇ, ಆರೋಪಿಗಳನ್ನು ಅಪರಾಧಿಗಳೆಂದು ಘೋಷಿಸಿ, ಶಿಕ್ಷೆಯನ್ನು ಅನುಭವಿಸಲು ಜೈಲಿಗೆ ಕಳುಹಿಸಬೇಕು ಎಂದೇನಿಲ್ಲ, ಆದರೆ ವ್ಯವಹರಣೆಗಳು ನಡೆಯುತ್ತಿರುವ ಅವಧಿಯಲ್ಲಿ ಅನುಸರಿಸಬೇಕಾದ ವ್ಯವಹರಣೆಗಳ ವಿಫುಲ ತತ್ವಗಳ ಚರ್ಚೆಗಳಿವೆ. ಆರೋಪಿತ ವ್ಯಕ್ತಿಗಳು ತಮ್ಮ ರಕ್ಷಣೆಗಾಗಿ ಅವರ ಪ್ರಕರಣವನ್ನು ಮಂಡಿಸುವ ಅವಕಾಶವನ್ನು ಯಾವಾಗಲೂ ಹೊಂದಿರುತ್ತಾರೆ.

ಹಾಗಾಗಿ, ಅರ್ಜಿದಾರನಿಂದ ಆತನ ಹಕ್ಕುಗಳನ್ನು ಮಂಡಿಸುವ ಸಂಬಂಧದಲ್ಲಿನ ಅವಕಾಶವನ್ನು ಕಿತ್ತುಕೊಳ್ಳಲಾಗುವುದಿಲ್ಲ.

21. ಮಾನ್ಯ ನ್ಯಾಯವಾದಿಗಳು, ಅರ್ಜಿದಾರನ ಗೋಚರ ಕೃತ್ಯವು ಕಂಡುಬಂದಿಲ್ಲ ಮತ್ತು ಅರ್ಜಿದಾರನು ಅಪರಾಧಕ್ಕೆ ಯಾವುದೇ ರೀತಿಯಲ್ಲೂ ಸಂಬಂಧಿಸಿರುವುದಿಲ್ಲ ಎಂದು ಸಹ ನಿವೇದಿಸಿಕೊಂಡಿದ್ದಾರೆ. ಈ ಸಂಬಂಧದಲ್ಲಿ, ಭಾರತ ದಂಡ ಸಂಹಿತೆಯ 34ನೇ ಪ್ರಕರಣದ ಅಡಿಯಲ್ಲಿ ಪರಿಭಾಷಿಸಲಾದ ಸಾಮಾನ್ಯ ಉದ್ದೇಶದ ಪರಿಕಲ್ಪನೆಯನ್ನು ಮತ್ತು ಭಾರತ ದಂಡ ಸಂಹಿತೆಯ 149ನೇ ಪ್ರಕರಣದಲ್ಲಿನ ಕಾನೂನುಬಾಹಿರ ಕೂಟದ ಸದಸ್ಯನ ಹೊಣೆಗಾರಿಕೆಯನ್ನು ಉಲ್ಲೇಖಿಸುವುದು ಅಗತ್ಯವಾಗಿದೆ. ಅಪರಾಧವನ್ನು ಎಸಗುವ ಉದ್ದೇಶವನ್ನು ಹಂಚಿಕೊಳ್ಳುವ ವ್ಯಕ್ತಿಯು, ಒಟ್ಟು ಅಭಿಪ್ರಾಯದ ಮತ್ತು ಅಪರಾಧವನ್ನು ಎಸಗುವ ಮನಸ್ಸುಗಳು ಒಟ್ಟುಗೂಡುವ ಕಾರಣದಿಂದ ಹೊಣೆಗಾರನಾಗುತ್ತಾನೆ. ಅಪರಾಧವನ್ನು ಎಸಗುವ ಸಾಮಾನ್ಯ ಉದ್ದೇಶವಿರುವ ಕಾನೂನುಬಾಹಿರ ಕೂಟದ ಸದಸ್ಯನಾಗಿಯೂ ಸಹ ಇದು ಸರಿ.

22. ಇನ್ನೊಂದೆಡೆ, ನಿರ್ಣಯವು ಅಪರಾಧದ ಸಂಬಂಧದಲ್ಲಿರಲಿ ಅಥವಾ ನಿರಪರಾಧದ ಸಂಬಂಧದಲ್ಲಿರಲಿ, ದೂರುದಾರ ಅಥವಾ ಪ್ರಾಸಿಕ್ಯೂಷನ್, ಹಾಗೆಯೇ ಆರೋಪಿಯು ಸಹ ಆ ನಿರ್ಣಯಕ್ಕೆ ಬರಲಾಗದು; ಏಕೆಂದರೆ, ಆ ನಿರ್ಣಯಕ್ಕೆ ಬರಲು ಇವು ಅತ್ಯಂತ ಆತುರದ ದಿನಗಳಾಗಿವೆ.

23. ಕಾನೂನುಬಾಹಿರ ಕಾರ್ಯಚಟುವಟಿಕೆಗಳ ಅಧಿನಿಯಮದ ಉಪಬಂಧಗಳು, ಏನನ್ನು ನಿಷೇಧಿಸಲಾಗಿದೆ ಎಂಬುದನ್ನು ಮತ್ತು ಯಾವಾಗ ಉಪಬಂಧಗಳನ್ನು ಅನ್ವಯಿಸಬಹುದಾಗಿದೆ ಎಂಬ ಸಂದರ್ಭಗಳನ್ನು ಪರಿಭಾಷಿಸಿದಾಗ, ಘಟಕಾಂಶಗಳ ಹೆಚ್ಚಿನ ಭಾಗವು ಸಂಗತಿಗಳಲ್ಲಿರಬಹುದಾಗಿದೆ. ಅಪರಾಧದ ಅಥವಾ ಅಪರಾಧಿಯ ಸಕ್ರಿಯ ಭಾಗವನ್ನು ಮಾತ್ರವೇ ನಿರ್ದೇಶಿಸುವುದು ಅಗತ್ಯವಾಗಿರದೆ, ನಿಷ್ಕ್ರಿಯ ಪಾಲ್ಗೊಳ್ಳುವಿಕೆಯನ್ನು ಸಹ ಗುರುತಿಸಬೇಕಾಗುತ್ತದೆ. ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967ನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಶಾಸನವು ಅಧಿನಿಯಮವಾಗಿರುವ ಅರ್ಜಿದಾರನ ಉದ್ದೇಶದ ವಿರುದ್ಧ

ಕಾನೂನುಬಾಹಿರ ಕಾರ್ಯಚಟುವಟಿಕೆಗಳ ಅಧಿನಿಯಮವನ್ನು ಅನ್ವಯಿಸಲಾಗಿದೆ ಮತ್ತು ಸದರಿ ಅಧಿನಿಯಮದ ಪ್ರಸ್ತಾವನೆಯು ಈ ಕೆಳಗಿನಂತಿದೆ:

> *"ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967 (1967ರ 37)ರಲ್ಲಿ (ಇದರಲ್ಲಿ ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), ದೀರ್ಘ ಶೀರ್ಷಿಕೆಯ ನಂತರ ಮತ್ತು ಅಧಿನಿಯಮಿತಿಯನ್ನು ಸೂತ್ರೀಕರಿಸುವ ಮೊದಲು, ಈ ಮುಂದಿನ ಪ್ರಸ್ತಾವನೆಯನ್ನು ಸೇರಿಸತಕ್ಕದ್ದು, ಎಂದರೆ:–*
>
> *"ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು, ಅದರ 4385ನೇ ಸಭೆಯಲ್ಲಿ, 28ನೇ ಸೆಪ್ಟಂಬರ್, 2001ರಂದು ಗೊತ್ತುವಳಿ ಸಂಖ್ಯೆ: 1873 (2001)ನ್ನು ಅಂಗೀಕರಿಸಿದ್ದು, ವಿಶ್ವಸಂಸ್ಥೆಯ ಸನ್ನದಿನ VIIನೇ ಅಧ್ಯಾಯದಲ್ಲಿ, ಅಂತರಾಷ್ಟ್ರೀಯ ಭಯೋತ್ಪಾದನೆಯ ವಿರುದ್ಧ ಹೋರಾಡಲು ಎಲ್ಲಾ ರಾಷ್ಟ್ರಗಳು ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಅಗತ್ಯಪಡಿಸಲಾಗಿರುವುದರಿಂದ;*
>
> *ಮತ್ತು, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಗೊತ್ತುವಳಿಗಳಾದ 1267(1999), 1333(2000), 1363(2001) 1390(2002), 1455(2003), 1526(2004), 1566(2004), 1617(2005), 1735(2006) ಮತ್ತು 1822(2008) ಇವುಗಳ ಮೂಲಕ, ಕೆಲವು ಭಯೋತ್ಪಾದಕರು ಮತ್ತು ಭಯೋತ್ಪಾದಕ ಸಂಘಟನೆಗಳು ರಾಷ್ಟ್ರಗಳ ಒಳಗೆ ಪ್ರವೇಶಿಸುವುದನ್ನು ಅಥವಾ ಅವುಗಳ ರಾಜ್ಯಕ್ಷೇತ್ರಗಳ ಮುಖಾಂತರ ಚಲಿಸುವುದನ್ನು ಪ್ರತಿಬಂಧಿಸಲು ಹಾಗೂ ಅನುಸೂಚಿಯಲ್ಲಿ ಪಟ್ಟಿ ಮಾಡಿದ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ಆಯುಧಗಳ ಮತ್ತು ಮದ್ದುಗುಂಡುಗಳ ನೇರ ಅಥವಾ ಪರೋಕ್ಷ ಪೂರೈಕೆ, ಮಾರಾಟ ಅಥವಾ ವರ್ಗಾವಣೆಯನ್ನು*

*ಪ್ರತಿಬಂಧಿಸಲು, ಸದರಿ ಭಯೋತ್ಪಾದಕರ ಅಥವಾ ಭಯೋತ್ಪಾದಕ ಸಂಘಟನೆಗಳ ಆಸ್ತಿಗಳನ್ನು ಮತ್ತು ಇತರ ಹಣಕಾಸು ಸಂಪನ್ಮೂಲಗಳನ್ನು ತಡೆಹಿಡಿಯಲು, ಅವುಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ರಾಷ್ಟ್ರಗಳನ್ನು ಅಗತ್ಯಪಡಿಸಲಾಗಿರುವುದರಿಂದ;*

ಮತ್ತು, ವಿಶ್ವಸಂಸ್ಥೆ (ಭದ್ರತಾ ಮಂಡಳಿ) ಅಧಿನಿಯಮ, 1947ರ (1947ರ 43) 2ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕೇಂದ್ರ ಸರ್ಕಾರವು, ಭಯೋತ್ಪಾದನೆಯ ಪ್ರತಿಬಂಧ ಮತ್ತು ದಮನ (ಭದ್ರತಾ ಮಂಡಳಿ ಗೊತ್ತುವಳಿಗಳ ಅನುಷ್ಠಾನ) ಆದೇಶ, 2007ನ್ನು ಹೊರಡಿಸಿರುವುದರಿಂದ;

ಮತ್ತು, ಸದರಿ ಗೊತ್ತುವಳಿಗಳನ್ನು ಮತ್ತು ಆದೇಶವನ್ನು ಕಾರ್ಯರೂಪಕ್ಕೆ ತರುವುದು ಹಾಗೂ ಭಯೋತ್ಪಾದಕ ಕಾರ್ಯಚಟುವಟಿಕೆಗಳನ್ನು ಪ್ರತಿಬಂಧಿಸಲು ಮತ್ತು ಅವುಗಳನ್ನು ಸಮರ್ಥವಾಗಿ ನಿಭಾಯಿಸಲು ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ವಿಶೇಷ ಉಪಬಂಧಗಳನ್ನು ರಚಿಸುವುದು ಅವಶ್ಯವೆಂದು ಪರಿಗಣಿಸಿರುವುದರಿಂದ;"

24. ಎನ್‌ಐಎ ಸಂಬಂಧಪಡುವಷ್ಟರಮಟ್ಟಿಗೆ, ಅದು ಶಾಸನದ ಅಡಿಯಲ್ಲಿ ಸ್ಥಾಪಿತವಾದ ಒಂದು ಸಂಸ್ಥೆಯಾಗಿದೆ ಮತ್ತು ವ್ಯವಹರಣೆಗಳನ್ನು ಪ್ರಾರಂಭಿಸಲು ಮಂಜೂರಾತಿಯನ್ನು ಸಕ್ಷಮ ಪ್ರಾಧಿಕಾರಿಗಳಾದ ಘನ ರಾಷ್ಟ್ರಪತಿಗಳು ನೀಡಬೇಕು. ಇದು ವಸ್ತುನಿಷ್ಠ ನೆರವೇರಿಕೆಯಾಗಿದೆ ಮತ್ತು ಮೊದಲ ನೋಟದಲ್ಲೇ ಘಟಕಾಂಶಗಳ ಇರುವಿಕೆ ಬಗ್ಗೆ ಸ್ಥಿರೀಕರಣವಾಗಿದೆ ಹಾಗೂ ಮಂಜೂರಾತಿಯನ್ನು ನೀಡುವುದಕ್ಕೆ ಸಕ್ಷಮ ಪ್ರಾಧಿಕಾರವನ್ನು ಉತ್ತೇಜಿಸುವಂಥ ನಿಷ್ಕ್ರಿಯ ಪ್ರಕರಣದಲ್ಲಿ ತೀವ್ರ ಪರಿಣಾಮಗಳ ಮುಂದಾಲೋಚನೆಯಾಗಿದೆ ಮತ್ತು ಈ ಸಂಬಂಧದಲ್ಲಿ, ಪ್ರಾರಂಭದಲ್ಲಿ ವ್ಯವಹರಣೆಗಳನ್ನು ಪ್ರಾರಂಭಿಸಲು ಹೊರಡಿಸಿದ ಮಂಜೂರಾತಿ ಆದೇಶವು, ವ್ಯವಹರಣೆಗಳನ್ನು ಪ್ರಾರಂಭಿಸಿದ ನಂತರ ಬಂದಿದೆ.

ಮಂಜೂರಾತಿ ಆದೇಶವು ತಪ್ಪಾಗಿದೆ ಎಂದು ಕ್ಲೇಮು ಮಾಡಿರುವುದಲ್ಲದೆ, ಸದರಿ ಆದೇಶವು ಹೇಗೆ ಅಥವಾ ಏಕೆ ತಪ್ಪಾಗಿದೆ ಎಂಬುದಕ್ಕೆ, ಮಂಜೂರಾತಿ ಆದೇಶವು ತಪ್ಪಾಗಿರುವ ಸಂದರ್ಭಗಳನ್ನು ಹೇಳುವುದು ಅಗತ್ಯವಾಗಿದೆ. ನಿರ್ದಿಷ್ಟ ಆದೇಶ ಅಥವಾ ಅಧಿಸೂಚನೆ ತಪ್ಪಾಗಿದೆ ಅಥವಾ ಅಸಿಂಧುವಾಗಿದೆ ಎಂದು ಕ್ಲೇಮು ಮಾಡಬಯಸುವ ವ್ಯಕ್ತಿಯು, ಪ್ರಯೋಜನವನ್ನು ಕ್ಲೇಮು ಮಾಡಲು, ಕೇವಲ ಕ್ಲೇಮು ಅಸಿಂಧುವಾಗಿದೆ ಮತ್ತು ತಪ್ಪಾಗಿದೆ ಎನ್ನುವ ಮೂಲಕ ಪೂರ್ಣಗೊಳ್ಳುವುದಿಲ್ಲ, ಆತನು ಕಾನೂನಿನಲ್ಲಿ ಆದೇಶ ಅಥವಾ ಅಧಿಸೂಚನೆಯು ಅಸಿಂಧು ಅಥವಾ ತಪ್ಪು ಎಂದು ಸಾಬೀತುಪಡಿಸುವಂಥ ಅಂಶಗಳನ್ನು ತಿಳಿಸಬೇಕಾಗುತ್ತದೆ. ಈ ಸಂಬಂಧದಲ್ಲಿ, ದಿನಾಂಕವಾರು ಘಟನೆಗಳನ್ನು ಉಲ್ಲೇಖಿಸುವುದು ಅಗತ್ಯವಾಗಿದೆ.

| | | |
|---|---|---|
| 1. | ಶಿವಾಜಿನಗರದಲ್ಲಿ ರುದ್ರೇಶನ ಹತ್ಯೆಯಾದ ದೇಹವು ಕಂಡುಬಂದ ಘಟನೆಯ ದಿನಾಂಕ | 16.10.2016 |
| 2. | ಜಯರಾಮ್ ದೂರು ಸಲ್ಲಿಸಿದ ದಿನಾಂಕ | |
| 3. | ಭಾರತ ದಂಡ ಸಂಹಿತೆಯ 302 ಮತ್ತು 34ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ ಅಪರಾಧ ಸಂಖ್ಯೆ: 124/2016ರಲ್ಲಿ ಮೊಕದ್ದಮೆ ದಾಖಲಿಸಿದ ದಿನಾಂಕ | 16.10.2016 |
| 4. | ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯಕ್ಕೆ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಿದ ದಿನಾಂಕ | 16.10.2016 |
| 5. | ಪ್ರಥಮ ಮಾಹಿತಿ ವರದಿ ಮತ್ತು ದೂರನ್ನು ಸಲ್ಲಿಸಲಾದ ನ್ಯಾಯಾಲಯ: 43ರ ಹೆಚ್ಚುವರಿ ಸಿಎಮ್ಎಮ್ ನ್ಯಾಯಾಲಯ, ಮೇಯೋಹಾಲ್, ಬೆಂಗಳೂರು ನಗರ | |

25. ತನಿಖೆ ಪ್ರಗತಿಯಲ್ಲಿದ್ದಾಗ, ಭಾರತ ಸರ್ಕಾರವು ಪ್ರಕರಣವನ್ನು ಎನ್‌ಐಎಗೆ ವಹಿಸಲು ಆದೇಶಿಸಿತು. ಈ ಸಂಬಂಧದಲ್ಲಿ, ದಿನಾಂಕ: 07.12.2016ರಂದು ಭಾರತದ ಮಾನ್ಯ ರಾಷ್ಟ್ರಪತಿಗಳ ಹೆಸರಿನಲ್ಲಿ ಮಂಜೂರಾತಿ ಆದೇಶವನ್ನು ಹೊರಡಿಸಲಾಯಿತು. ಪ್ರಾರಂಭದಲ್ಲಿ, ಪ್ರಥಮ ಮಾಹಿತಿ ವರದಿಯನ್ನು ಅಪರಿಚಿತ ವ್ಯಕ್ತಿಗಳ ವಿರುದ್ಧ ದಾಖಲಿಸಲಾಗಿತ್ತು ಮತ್ತು ತರುವಾಯದಲ್ಲಿ, ದಿನಾಂಕ: 27.10.2016ರಂದು ನಾಲ್ವರು ವ್ಯಕ್ತಿಗಳನ್ನು ಆರೋಪಿ ಸಂಖ್ಯೆ: 1ರಿಂದ 4 ಎಂದು ನಿರ್ಧರಿಸಿ ದಸ್ತಗಿರಿ ಮಾಡಲಾಯಿತು. 5ನೇ ಆರೋಪಿತ ವ್ಯಕ್ತಿಯನ್ನು (ಈ ಅರ್ಜಿಯಲ್ಲಿನ ಅರ್ಜಿದಾರ) ದಿನಾಂಕ: 02.11.2016ರಂದು ದಸ್ತಗಿರಿ ಮಾಡಲಾಯಿತು. ಆತನನ್ನು ಆರೋಪಿ ಸಂಖ್ಯೆ 5 ಎಂದು ನಿರ್ಧರಿಸಲಾಯಿತು. ಈಗ, ತನಿಖೆಯನ್ನು ರಾಷ್ಟ್ರೀಯ ತನಿಖಾ ಏಜನ್ಸಿಯು ನಡೆಸುತ್ತಿದೆ ಮತ್ತು ಭಾರತ ದಂಡ ಸಂಹಿತೆಯ 109, 120ಬಿ, 150, 153ಎ, 201; ಆಯುಧಗಳ ಅಧಿನಿಯಮ, 1959ರ 3ನೇ ಮತ್ತು 27ನೇ ಪ್ರಕರಣಗಳು ಹಾಗೂ ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967ರ 15, 16, 17, 18 ಮತ್ತು 19ನೇ ಪ್ರಕರಣಗಳ ಹೊರತಾಗಿ, ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 302ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ, ಅಪರಾಧ ಸಂಖ್ಯೆ: 124/2016 ಆಗಿದೆ.

26. ವಿಶೇಷ ನ್ಯಾಯಾಲಯವು ಸಂಜ್ಞೇಯತೆಯನ್ನು ತೆಗೆದುಕೊಂಡ ನಂತರ, ವಿಶೇಷ ಸಿ.ಸಿ. ಸಂಖ್ಯೆ: 181/2017ರಲ್ಲಿ, ಆರೋಪಿ ಸಂಖ್ಯೆ 5 ಈತನ ಪರವಾಗಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದ ಅಡಿಯಲ್ಲಿ ವಿಮೋಚನೆ ಅರ್ಜಿಯನ್ನು ಸಲ್ಲಿಸಲಾಗಿದೆ. ದಿನಾಂಕ: 02.01.2018ರ ಆದೇಶದ ಮೂಲಕ, ಸದರಿ ಅರ್ಜಿಯನ್ನು ವಜಾಗೊಳಿಸಲಾಗಿದೆ. ಸದರಿ ಆದೇಶದ ಸುಸಂಗತ ಭಾಗವನ್ನು ಈ ಕೆಳಗಿನಂತೆ ಓದಲಾಗಿದೆ:

*"22. ಆರೋಪಿಸಲಾದ ಅಪರಾಧಗಳ ಸಂಜ್ಞೇಯತೆಯನ್ನು ಈ ನ್ಯಾಯಾಲಯವು ಈಗಾಗಲೇ ತೆಗೆದುಕೊಂಡಿದೆ ಎಂದು ಇಲ್ಲಿ ಹೇಳುವ ಅಗತ್ಯವಿಲ್ಲ ಮತ್ತು ಆರೋಪಿಸಲಾದ ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ದಿನಾಂಕದಂದು ಮಂಜೂರಾತಿ ಪಡೆಯುವುದು ಪೂರ್ವಭಾವಿ ಷರತ್ತೆಂದು ಇಲ್ಲಿ ಉಲ್ಲೇಖಿಸುವ ಅಗತ್ಯವಿಲ್ಲ. ಆರೋಪಿತ ಅಪರಾಧಗಳ ಸಂಜ್ಞೇಯತೆಯ ಸಮಯದಲ್ಲಿ ಎನ್ಐಎ ಇದು ಮಂಜೂರಾತಿಯನ್ನು ಪಡೆದುಕೊಂಡಿದೆ ಮತ್ತು ಈ ನ್ಯಾಯಾಲಯವು ಈಗಾಗಲೇ ಸಂಜ್ಞೇಯತೆಯನ್ನು ತೆಗೆದುಕೊಂಡಿರುವುದರಿಂದ, ಮಂಜೂರಾತಿಯ ನೈಜತೆಗೆ ಅಥವಾ ಅನ್ಯಥಾ ಕಾರಣಕ್ಕೆ ಸಂಬಂಧಿಸಿದಂತೆ ಯಾವುವೇ ಆದೇಶಗಳನ್ನು ಹೊರಡಿಸುವುದು, ಅಪೀಲು ಅಥವಾ ಪರಿಷ್ಕರಣಾ ಅಧಿಕಾರವ್ಯಾಪ್ತಿಯ ಮೇಲಿನ ಆಕ್ರಮಣವಾಗುವುದು ಎಂಬ ಸರಳ ಕಾರಣಕ್ಕಾಗಿ ಮಂಜೂರಾತಿ ಸಂಬಂಧದಲ್ಲಿನ ಯಾವುವೇ ಆದೇಶಗಳನ್ನು ಹೊರಡಿಸುವುದು ಸರಿಯಲ್ಲವೆಂದು ಈ ನ್ಯಾಯಾಲಯವು ನಿಶ್ಚಿತ ಅಭಿಪ್ರಾಯವನ್ನು ತಾಳಿದೆ. ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ಆದೇಶವು ಸಹ ಈ ದಿನದಂದು ಸಂಪೂರ್ಣವಾಗಿದೆ. ಆದುದರಿಂದ, ಈ ಕಂಡಿಕೆಗಳಲ್ಲಿ ಮತ್ತು ಈ ಆದೇಶದ ಹಿಂದಿನ ಕಂಡಿಕೆಗಳಲ್ಲಿ ನೀಡಿದ ಕಾರಣಗಳಿಗಾಗಿ, ಎನ್ಐಎ ಒದಗಿಸಿದ ಸಾಕ್ಷ್ಯಗಳು, ಪ್ರಕರಣವನ್ನು ಮುಂದುವರಿಸಲು ಪರ್ಯಾಪ್ತವಾಗಿವೆ ಎಂದು ಮತ್ತು ಅದು ಆರೋಪಿಸಲಾದ ಅಪರಾಧಗಳ ಮೊದಲ ನೋಟದ ಪ್ರಕರಣದ ಇರುವಿಕೆಯ ವ್ಯಕ್ತಿನಿಷ್ಠ ಸಮಾಧಾನವನ್ನು ನೀಡುವುದು ಎಂದು ಎನ್ಐಎ ಸಾಬೀತುಪಡಿಸಿದೆ. ಆದುದರಿಂದ, ಅಂಶ ಸಂಖ್ಯೆ: 2ರ ವಸ್ತುವಿಷಯವು ನಕಾರಾತ್ಮಕವಾಗಿ ಉತ್ತರಿಸಬೇಕಾದುದಕ್ಕೆ ತಕ್ಕುದಾಗಿದೆ; ಅಂಶ ಸಂಖ್ಯೆ: 3ರ ವಸ್ತುವಿಷಯವು ಸಕಾರಾತ್ಮಕವಾಗಿ*

*ಉತ್ತರಿಸಬೇಕಾದುದಕ್ಕೆ ತಕ್ಕುದಾಗಿದೆ ಮತ್ತು ಅಂಶ ಸಂಖ್ಯೆ: 4ರ ವಸ್ತುವಿಷಯುವು ನಕಾರಾತ್ಮಕವಾಗಿ ಉತ್ತರಿಸಬೇಕಾದುದಕ್ಕೆ ತಕ್ಕುದಾಗಿದೆ ಹಾಗೂ ಸದರಿ ಅಂಶಗಳಿಗೆ ಈ ಮೂಲಕ ತದನುಸಾರವಾಗಿ ಉತ್ತರಿಸಲಾಗಿದೆ. ಈ ನ್ಯಾಯಾಲಯವು ಈ ಮುಂದಿನ ಆದೇಶವನ್ನು ಹೊರಡಿಸಲು ಕ್ರಮ ಜರುಗಿಸಿದೆ:*

***ಆದೇಶ***

*ಆರೋಪಿ ಸಂಖ್ಯೆ 5 ಈತನು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 227ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವುದನ್ನು ಈ ಮೂಲಕ ವಜಾಗೊಳಿಸಲಾಗಿದೆ. ವಿಚಾರಣೆಯಲ್ಲಿರುವ ಪ್ರಕರಣವು, ಎಲ್ಲಾ ಆರೋಪಿತ ವ್ಯಕ್ತಿಗಳ ವಿರುದ್ಧ ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿದಂತೆ ಆರೋಪಿಸಲಾದ ಅಪರಾಧಗಳ ಸಂಬಂಧದಲ್ಲಿ ಆರೋಪವನ್ನು ರೂಪಿಸುವುದರೊಂದಿಗೆ ಪ್ರಕರಣದಲ್ಲಿ ಮುಂದುವರಿಯಬೇಕಾದುದಕ್ಕೆ ತಕ್ಕುದಾಗಿದೆ.*

– – –

ಅಲ್ಲದೆ, ಅರ್ಜಿದಾರನು ಪರಿಹಾರಕ್ಕಾಗಿ ಒತ್ತಾಯಿಸಿರುವ ಪ್ರಕರಣವನ್ನು, ಒಂದೇ ಪರಿಹಾರಕ್ಕಾಗಿ ಗಮನಾರ್ಹವಾಗಿ ಬೇರೆ ಬೇರೆ ನ್ಯಾಯಾಲಯಗಳ ಮುಂದೆ ನಿರ್ವಹಿಸಲಾಗುತ್ತಿದೆ ಎಂದು ಉಲ್ಲೇಖಿಸುವುದು ಅಗತ್ಯವಾಗಿದೆ.

27. ಇದರಲ್ಲಿನ ಅರ್ಜಿದಾರನನ್ನು ಒಳಗೊಂಡು ಎಲ್ಲ ಐವರು ಆರೋಪಿತ ವ್ಯಕ್ತಿಗಳು, ರಿಟ್ ಅರ್ಜಿ ಸಂಖ್ಯೆ 5005/2017ರೊಂದಿಗಿನ (ಸಿ/ಡಬ್ಲ್ಯು) ರಿಟ್ ಅರ್ಜಿ ಸಂಖ್ಯೆ: 7267–7270/2017 ಇವುಗಳಲ್ಲಿ, ದಿನಾಂಕ: 05.11.2016ರ ಅಪರಾಧ ಸಂಖ್ಯೆ: 124/2016ರಲ್ಲಿನ ಆದೇಶವನ್ನು ಮತ್ತು ಎನ್‌ಐಎ ಇದು ತನಿಖೆ ಮಾಡಬೇಕೆಂದು ಪ್ರಕರಣವನ್ನು ವಹಿಸುವುದಕ್ಕಾಗಿ ಆದೇಶಿಸಿದ ದಿನಾಂಕ: 19.04.2017ರ

ಕೇಂದ್ರ ಸರ್ಕಾರದ ಆದೇಶವನ್ನು ಪ್ರಶ್ನಿಸಿದ್ದಾರೆ. ಈ ಸಂದರ್ಭದಲ್ಲಿ, ಕಮರ್ಷಿಯಲ್ ರಸ್ತೆ ಪೊಲೀಸ್ ಠಾಣೆಯು ಅಪರಾಧ ಸಂಖ್ಯೆ: 124/2015ರಲ್ಲಿ ಆರೋಪಿಸಿದ ಅಪರಾಧಗಳಿಗಾಗಿ, ದಿನಾಂಕ: 16.10.2016ರ ಘಟನೆಯ ಸಂಬಂಧದಲ್ಲಿ ದಾಖಲಿಸಿದಂಥ ಕ್ರಿಮಿನಲ್ ಪ್ರಕರಣವನ್ನು ಪ್ರಶ್ನಿಸಬೇಕೆಂದು ಅಪರಿವರ್ತನೀಯವಾಗಿ ಪುನರುಚ್ಚರಿಸುವುದು ಅಗತ್ಯವಾಗಿದೆ.

28. ಮಾನ್ಯ ನ್ಯಾಯಮೂರ್ತಿಗಳು, ರಿಟ್ ಅರ್ಜಿ ಸಂಖ್ಯೆ: 6005/2017ರೊಂದಿಗೆ ರಿಟ್ ಅರ್ಜಿ ಸಂಖ್ಯೆಗಳು: 7267–7270/2017 ಇವುಗಳಿಗೆ ಭಾಗಶಃ ಅನುಮತಿಸಿದ್ದಾರೆ, ಅದರಲ್ಲಿ ಎನ್‌ಐಎ ಇದಕ್ಕೆ ಪ್ರಕರಣದ ತನಿಖೆಯನ್ನು ವಹಿಸಿದ ದಿನಾಂಕ: 19.04.2017ರ ಕೇಂದ್ರ ಸರ್ಕಾರದ ಆದೇಶವನ್ನು ತಳ್ಳಿಹಾಕಲಾಗಿದೆ ಮತ್ತು ವಿಶೇಷ ನ್ಯಾಯಾಧೀಶರು ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ಆದೇಶವನ್ನು ತಳ್ಳಿಹಾಕಲು ಮಾಡಿದ ಮನವಿಯನ್ನು ನಿರಾಕರಿಸಲಾಗಿದೆ ಹಾಗೂ ಮಾನ್ಯ ನ್ಯಾಯಮೂರ್ತಿಗಳು ಅರ್ಜಿದಾರನ ವಿರುದ್ಧ ದಾಖಲಿಸಿದ ಅಪರಾಧಗಳ ತನಿಖೆ ನಡೆಸುವುದನ್ನು, ಕಾನೂನುಬಾಹಿರ ಕಾರ್ಯಚಟುವಟಿಕೆಗಳ ಅಧಿನಿಯಮದ 43(1)ನೇ ನಿಯಮಕ್ಕೆ ಅನುಸಾರವಾಗಿ ಪ್ರತ್ಯರ್ಜಿದಾರ ಸಂಖ್ಯೆ 1–ರಾಜ್ಯವು ಮುಂದುವರಿಸತಕ್ಕದ್ದೆಂದು ಆದೇಶಿಸಿದ್ದಾರೆ.

29. ಹಾಗಾಗಿ, ರಿಟ್ ಅರ್ಜಿ ಸಂಖ್ಯೆ: 6005/2017ಕ್ಕೆ ಸಂಬಂಧಿಸಿದ ರಿಟ್ ಅರ್ಜಿ ಸಂಖ್ಯೆಗಳು: 7267–7270/2017 ಇವುಗಳಲ್ಲಿ ಮಾನ್ಯ ನ್ಯಾಯಮೂರ್ತಿಗಳು ಹೊರಡಿಸಿದ ಆದೇಶದ ಕಾರಣದಿಂದ, ತನಿಖೆಯನ್ನು ರಾಜ್ಯ ಸರ್ಕಾರವು ನಡೆಸಬೇಕೆಂದು ಮತ್ತು ಎನ್‌ಐಎ ನಡೆಸಬಾರದು ಎಂಬುದಕ್ಕೆ ಈ ನ್ಯಾಯಾಲಯವು ಅನುಮೋದನೆಯನ್ನು ನೀಡಿದೆ ಎಂಬುದು ಇದರಿಂದ ಅತ್ಯಂತ ಸ್ಪಷ್ಟವಾಗುತ್ತದೆ. ರಿಟ್ ಅರ್ಜಿ ಸಂಖ್ಯೆ: 6005/2017ಕ್ಕೆ ಸಂಬಂಧಿಸಿದ ರಿಟ್ ಅರ್ಜಿ ಸಂಖ್ಯೆಗಳು: 7267–7270/2017 ಇವುಗಳಲ್ಲಿ ಮಾನ್ಯ ನ್ಯಾಯಮೂರ್ತಿಗಳು ಹೊರಡಿಸಿದ ಆದೇಶವನ್ನು 2214–2217/2017 ಇವುಗಳಿಗೆ ಸಂಬಂಧಿಸಿದ ರಿಟ್ ಅರ್ಜಿ ಸಂಖ್ಯೆ:

2213/2017ರಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ತಳ್ಳಿಹಾಕಿದೆ. ತತ್ಸಂಬಂಧಿ ಕಂಡಿಕೆ ಸಂಖ್ಯೆ: 49ನ್ನು ಈ ಕೆಳಗಿನಂತೆ ಓದಲಾಗಿದೆ:

> *"49. ಮೇಲಿನ ಚರ್ಚೆಯ ಅಭಿಪ್ರಾಯದಲ್ಲಿ, ಕಮರ್ಷಿಯಲ್ ರಸ್ತೆ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 124/2016ರಲ್ಲಿನ ಅಪರಾಧಗಳನ್ನು ಕುರಿತು ತನಿಖೆ ಮಾಡಲು ರಾಷ್ಟ್ರೀಯ ತನಿಖಾ ಏಜನ್ಸಿಗೆ ನಿರ್ದೇಶಿಸಿ, ಗೃಹ ವ್ಯವಹಾರಗಳ ಮಂತ್ರಾಲಯವು ಹೊರಡಿಸಿದ ದಿನಾಂಕ: 07.02.2016ರ ಆದೇಶವನ್ನು ತಳ್ಳಿಹಾಕುವುದಕ್ಕೆ ಸಂಬಂಧಿಸಿದಷ್ಟರಮಟ್ಟಿಗೆ, ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಪ್ರಶ್ನಿತ ಆದೇಶವು ಸಮರ್ಥನೀಯವಲ್ಲದ ಕಾನೂನಾಗಿದೆ. ಆದ್ದರಿಂದ, ಈ ಅಪೀಲುಗಳು ಸಂಪೂರ್ಣವಾಗಿ ಅನುಮತಿಸಲು ತಕ್ಕುದಾಗಿವೆ.*
>
> *50. ಪರಿಣಾಮವಾಗಿ, ನಾವು ಮುಂದಿನ ಆದೇಶವನ್ನು ಹೊರಡಿಸಿದ್ದೇವೆ"*
>
> *ಆದೇಶ*
>
> *(i) ಅಪೀಲುಗಳಿಗೆ ಅನುಮತಿ ನೀಡಲಾಗಿದೆ.*
>
> *(ii) ರಿಟ್ ಅರ್ಜಿ ಸಂಖ್ಯೆ: 6005/2017ಕ್ಕೆ ಸಂಬಂಧಿಸಿದ ರಿಟ್ ಅರ್ಜಿ ಸಂಖ್ಯೆ: 7267–7270/2017 ಇವುಗಳಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ದಿನಾಂಕ: 21.03.2017ರ ಸಾಮಾನ್ಯ ಆದೇಶವನ್ನು, ಅದು ಕಮರ್ಷಿಯಲ್ ರಸ್ತೆ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 124/2016ರಲ್ಲಿನ ಅಪರಾಧಗಳನ್ನು ಕುರಿತು ತನಿಖೆ ಮಾಡಲು ರಾಷ್ಟ್ರೀಯ ತನಿಖಾ ಏಜನ್ಸಿಗೆ ನಿರ್ದೇಶಿಸಿ, ಗೃಹ ವ್ಯವಹಾರಗಳ ಮಂತ್ರಾಲಯವು ಹೊರಡಿಸಿದ ದಿನಾಂಕ:*

*07.02.2016ರ ಆದೇಶವನ್ನು ತಳ್ಳಿಹಾಕುವುದಕ್ಕೆ ಸಂಬಂಧಿಸಿದಷ್ಟರಮಟ್ಟಿಗೆ ತಳ್ಳಿ ಹಾಕಲಾಗಿದೆ;*

*(iii) ರಿಟ್ ಅರ್ಜಿ ಸಂಖ್ಯೆ: 6005/2017ಕ್ಕೆ ಸಂಬಂಧಿಸಿದ ರಿಟ್ ಅರ್ಜಿ ಸಂಖ್ಯೆ: 7267–7270/2017 ಇವುಗಳನ್ನು ವಜಾಗೊಳಿಸಲಾಗಿದೆ."*

---

30. ಹಾಗಾಗಿ, ರಿಟ್ ಅಪೀಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಈ ನ್ಯಾಯಾಲಯವು, ತನಿಖೆಯನ್ನು ಎನ್‌ಐಎ ನಡೆಸಬೇಕೆಂಬ ಅದರ ಖಚಿತ ಮತ್ತು ನಿಖರ ನಿರ್ಣಯವನ್ನು ನೀಡಿದೆ ಎಂಬುದು ಈಗ ಅತ್ಯಂತ ಸ್ಪಷ್ಟವಾಗಿದೆ. ಈ ಸಂದರ್ಭಗಳ ಹಿನ್ನಲೆಯಲ್ಲಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣಕ್ಕೆ ಸಂಬಂಧಿಸಿದ ಈ ರಿಟ್ ಅರ್ಜಿಯಲ್ಲಿ, ಮಾನ್ಯ XLIX ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು (ಎನ್‌ಐಎ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ), ಬೆಂಗಳೂರು ಇವರು, ವಿಶೇಷ ಸಿ.ಸಿ. ಸಂಖ್ಯೆ: 181/2017ರಲ್ಲಿ ಹೊರಡಿಸಿದ ದಿನಾಂಕ: 02.01.2018ರ ಆದೇಶವನ್ನು ತಳ್ಳಿ ಹಾಕಲು ಮ್ಯಾಂಡಮಾಸ್ ರಿಟ್‌ನ್ನು ಹೊರಡಿಸುವುದಕ್ಕಾಗಿ ಮತ್ತು ಆ ಮೂಲಕ ಇದರಲ್ಲಿನ ಆರೋಪಿ ಸಂಖ್ಯೆ 5–ಅರ್ಜಿದಾರನನ್ನು ವಿಮೋಚನೆಗೊಳಿಸಬೇಕೆಂದು ಕೋರಲಾಗಿದೆ.

31. ಅಕ್ಷರಶಃ, ಈ ಅರ್ಜಿಯಲ್ಲಿ ಈ ನ್ಯಾಯಾಲಯದ ಮುಂದೆ ಮಾಡಿಕೊಂಡ ಮನವಿಯು ವಿಷಯಕ್ಕೆ ಮತ್ತು ಈ ನ್ಯಾಯಾಲಯದ ವಿಭಾಗೀಯ ಪೀಠವು ವ್ಯವಹರಿಸಿದಂಥ ಆದೇಶಕ್ಕೆ ವಿರುದ್ಧವಾದುದಾಗಿದೆ. ವ್ಯವಹರಣೆಯ ಹೊರತಾಗಿ, ಅರ್ಜಿದಾರನ ಇರಾದೆ, ಲೆಕ್ಕಾಚಾರ ಮತ್ತು ಉದ್ದೇಶವನ್ನು ಈ ದೃಷ್ಟಿಕೋನದಿಂದಲೂ ಸಹ ವಿಶ್ಲೇಷಿಸಬೇಕಾಗುತ್ತದೆ. "ಕಾನೂನನ್ನು ನೀನು ಮುರಿಯಲು ಸಾಧ್ಯವಾಗದಿದ್ದಾಗ, ಅದನ್ನು ಬಗ್ಗಿಸು" ಎಂಬ ಧೋರಣೆ ಹೊಂದಲು ಸಾಧ್ಯವಿಲ್ಲ.

32. ಸಂಜ್ಞೇಯತೆ, ಜಾಮೀನು ಅರ್ಜಿಯ ನ್ಯಾಯನಿರ್ಣಯ, ಮುಂತಾದಂಥ ಕ್ರಿಮಿನಲ್ ಪ್ರಕರಣದ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಸಾಗುವಾಗ, ಸಾಕ್ಷ್ಯದ ಗುಣಾರ್ಹತೆಯನ್ನು ವಿವೇಚಿಸುವ ಪ್ರಕ್ರಿಯೆಯು ವ್ಯತ್ಯಾಸಗೊಳ್ಳುತ್ತದೆ ಎಂಬುದು ಸುಪರಿಚಿತ ಪ್ರಕ್ರಿಯೆಯಾಗಿದೆ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 227ನೇ ಮತ್ತು 239ನೇ ಪ್ರಕರಣಗಳ ಅಡಿಯಲ್ಲಿ ನ್ಯಾಯನಿರ್ಣಯಿಸುವಾಗ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣಗಳ ಅಡಿಯಲ್ಲಿ ನ್ಯಾಯನಿರ್ಣಯಿಸುವಾಗ ಅಥವಾ ಅಂತಿಮ ತೀರ್ಪು ನೀಡುವಾಗ, ಕೆಲವೊಂದು ಸಂಗತಿಗಳನ್ನು ಪರಿಗಣಿಸಬೇಕಾಗುತ್ತದೆ. ಅರ್ಜಿದಾರನು, ಸಮರ್ಥನೀಯತೆಯ ಹೊರತಾಗಿ, ತನ್ನ ಮನವಿಯನ್ನು ಪರಿಗಣಿಸಬೇಕೆಂದು, ಮರು–ಪರಿಗಣಿಸಬೇಕೆಂದು ಮತ್ತು ಮತ್ತಷ್ಟು ಪರಿಗಣಿಸಬೇಕೆಂದು ಕ್ಲೇಮು ಮಾಡಲಾಗುವುದಿಲ್ಲ. ಅರ್ಜಿದಾರನು ತನ್ನ ಆತುರ ಅಥವಾ ಲೆಕ್ಕಾಚಾರದ ವಿಧಾನದಲ್ಲಿ ಆಕ್ಷೇಪಣೆಗೆ ಸಂಬಂಧಿಸಿದಂತೆ ಮತ್ತು ವ್ಯವಹರಣೆಗಳನ್ನು ಶೂನ್ಯಗೊಳಿಸುವಂತೆ ಕೋರಲು ಕಾರ್ಯಸಾಧ್ಯವಿರುವ ಎಲ್ಲಾ ವಿಧಾನಗಳನ್ನು ಅನುಸರಿಸುವಂತಿಲ್ಲ.

33. ಕಾನೂನುಬಾಹಿರ ಕೂಟದ ಸದಸ್ಯರು ಒಂದೇ ಉದ್ದೇಶ, ಒಂದೇ ಗುರಿಯ ಪರಿಕಲ್ಪನೆ ಹೊಂದಿರುವುದನ್ನು ಅಥವಾ ಸಂಚು ಮಾಡಿರುವುದನ್ನು, ದಸ್ತಾವೇಜೀಯ ಮತ್ತು ಮೌಖಿಕ ಸಾಕ್ಷ್ಯದಿಂದ ಬೆಂಬಲಿತ ವಾಸ್ತವಾಂಶಗಳನ್ನು ಮತ್ತು ಸಂಗತಿಗಳನ್ನು ಗಮನಕ್ಕೆ ತೆಗೆದುಕೊಂಡು ನ್ಯಾಯ ನಿರ್ಣಯಿಸಬೇಕಾಗುತ್ತದೆ. ಭಾರತ ಒಕ್ಕೂಟವು ಏಕಪಕ್ಷೀಯವಾಗಿ ಆದೇಶವನ್ನು ಹೊರಡಿಸಿರುವುದಿಲ್ಲ. ಹತ್ಯೆಯ ಅಪರಾಧವನ್ನು ಪತ್ತೆ ಮಾಡಿದ ನಂತರ ಅದು ಆದೇಶವನ್ನು ಹೊರಡಿಸಿದೆ. ಪಿಎಫ್ಐ ಸಂಘಟನೆಯ ತನ್ನ ಸದಸ್ಯತ್ವದ ಕಾರಣದಿಂದ ತನ್ನನ್ನು ಬಂಧಿಸಲಾಗಿತ್ತು ಎಂಬ ಅರ್ಜಿದಾರನ ನಿಲುವು ಸರಿಯಾದುದಲ್ಲ. ಮುಖ್ಯವಾಗಿ, ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿ ಸಂಖ್ಯೆ 5 ಆಗಿ ಆತನ ಬಂಧನಕ್ಕೆ ಆದೇಶ ನೀಡಲಾಗಿತ್ತು. ಹೊಸ ಸಾಕ್ಷ್ಯಗಳು ಮತ್ತು ಸಂದರ್ಭಗಳ ತರುವಾಯದ ಪತ್ತೆಹಚ್ಚುವಿಕೆಯು ಕಾನೂನುಬಾಹಿರ ಕಾರ್ಯಚಟುವಟಿಕೆಗಳ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಪರಾಧಗಳನ್ನು ಎಸಗಿರುವುದನ್ನು ಬಹಿರಂಗಪಡಿಸಿದೆ. ಹತ್ಯೆಯ ಕಾರಣದಿಂದ ಮಾತ್ರವಲ್ಲದೆ,

ಆನುಷಂಗಿಕ ಸಂದರ್ಭಗಳು ಮತ್ತು ಲಭ್ಯ ಸಾಕ್ಷ್ಯಗಳನ್ನು ಪರಿಗಣಿಸಿ, ಎನ್‌ಐಎಗೆ ಪ್ರಕರಣವನ್ನು ವಹಿಸಲು ಸಕಾರಣ ಆದೇಶವನ್ನು ಹೊರಡಿಸಲಾಗಿತ್ತು.

34. ವಿಶೇಷ ಸಿ.ಸಿ. ಸಂಖ್ಯೆ: 181/2017ರಲ್ಲಿ, ಐವರು ಆರೋಪಿತ ವ್ಯಕ್ತಿಗಳು ವಿಮೋಚನೆಗಾಗಿ ಅರ್ಜಿಯೊಂದಿಗೆ ಪ್ರಾರಂಭಿಸಿದ ಚರ್ಚೆಯನ್ನು ಹಾಗೂ ಆರೋಪಿ ಸಂಖ್ಯೆ: 1ರಿಂದ 4 ಇವರು ಕ್ರಿಮಿನಲ್ ಅಪೀಲನ್ನು ದಾಖಲಿಸಿದಾಗ, ಕ್ರಿಮಿನಲ್ ಅಪೀಲನ್ನು ವಜಾಗೊಳಿಸಿದ ನಂತರ, ಆರೋಪಿ ಸಂಖ್ಯೆ: 5 ಮತ್ತು ಆರೋಪಿ ಸಂಖ್ಯೆ: 1ರಿಂದ 4 ಇವರ ನಡುವೆ ನಂತರದಲ್ಲಿ ಸಂಪರ್ಕ ತಪ್ಪಿರುವುದನ್ನು ಹಾಗೂ ಆರೋಪವನ್ನು ರೂಪಿಸಿದ ಆದೇಶವನ್ನು ಸ್ಥಿರೀಕರಿಸಲಾಗಿದೆ. ತರುವಾಯದಲ್ಲಿ, ಎನ್‌ಐಎ ಇದಕ್ಕೆ ತನಿಖೆಯನ್ನು ವಹಿಸಿದ ಕೇಂದ್ರ ಸರ್ಕಾದ ಆದೇಶವನ್ನು ಹಾಗೂ ತನಿಖೆಯನ್ನು ವಹಿಸಿದ ಕೇಂದ್ರ ಸರ್ಕಾರದ ಆದೇಶವನ್ನು ರದ್ದುಗೊಳಿಸಲಾಗಿತ್ತು ಎಂಬುದಾಗಿ ಭಾಗಶಃ ಅನುಮತಿಸಬೇಕೆಂದು ಬಂದ ಮಾನ್ಯ ವಿಶೇಷ ನ್ಯಾಯಾಧೀಶರು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ, ಆರೋಪಿ ಸಂಖ್ಯೆ: 1ರಿಂದ 4 ಇವರು ರಿಟ್ ಅರ್ಜಿ ಸಂಖ್ಯೆ: 7267–7270/2017ನ್ನು ಸಲ್ಲಿಸಿದ್ದಾರೆ ಮತ್ತು ಆರೋಪಿ ಸಂಖ್ಯೆ: 5 ಈತನು ರಿಟ್ ಅರ್ಜಿ ಸಂಖ್ಯೆ: 6005/2017ನ್ನು ಸಲ್ಲಿಸಿದ್ದಾನೆ. ವಿಶೇಷ ಸಿ.ಸಿ. ಸಂಖ್ಯೆ: 181/2017ರಲ್ಲಿ ಮಾನ್ಯ ವಿಶೇಷ ನ್ಯಾಯಾಧೀಶರ ಆದೇಶವನ್ನು ಸ್ಥಿರೀಕರಿಸಲಾಗಿತ್ತು.

ಹಾಗಾಗಿ, ಫಲಿತಾಂಶವೆಂದರೆ, ವಿಚಾರಣೆಗೆ ಯಾವುದೇ ಅಡೆತಡೆ ಇರದಿರುವುದು. ಮುಂದಿನ ಸಂದರ್ಭಗಳಲ್ಲಿ, ದಿನಾಂಕ: 26.03.2018ರ ರಿಟ್ ಅರ್ಜಿ ಸಂಖ್ಯೆಗಳು: 2214–2217/2017ಕ್ಕೆ ಸಂಬಂಧಿಸಿರುವ ರಿಟ್ ಅರ್ಜಿ ಸಂಖ್ಯೆ: 2213/2017ರಲ್ಲಿ, ಈ ನ್ಯಾಯಾಲಯವು ಪ್ರತ್ಯರ್ಜಿದಾರ ಏಜನ್ಸಿಯು ತನಿಖೆ ನಡೆಸುವುದಕ್ಕೆ ದಾರಿ ಮಾಡಿಕೊಟ್ಟಿತು.

ಈ ಸಂದರ್ಭಗಳ ಹಿನ್ನಲೆಯಲ್ಲಿ, ಸಂಪೂರ್ಣ ರೀತಿಯಲ್ಲಿ ವ್ಯವಹರಣೆಗಳನ್ನು ನಡೆಸಿದ ತರುವಾಯ ನ್ಯಾಯವನ್ನು ನಿರ್ಣಯಿಸಿದಾಗ್ಯೂ, ಆ ವಿಷಯವನ್ನು ಕುರಿತು

ಪುನಃ ನ್ಯಾಯವನ್ನು ನಿರ್ಣಯಿಸಲು ನ್ಯಾಯಾಲಯವನ್ನು ಕೋರುವ ರೀತಿಯಲ್ಲಿರುವ ಸಂಗತಿಗಳ ಮೇಲಿನ ಆಕ್ಷೇಪಣೆ, ವಿವಿಧ ರೂಪಗಳಲ್ಲಿರುವ ಕಾನೂನು ಕ್ರಮಗಳು ಸರಿಯಾದವುಗಳಲ್ಲ.

35. ಭಯೋತ್ಪಾದಕ ಅಥವಾ ವಿಧ್ವಂಸಕ ಕಾರ್ಯಚಟುವಟಿಕೆಗಳು, ಒಬ್ಬ ವ್ಯಕ್ತಿಯ ಭಾಷಿಕ ಅಥವಾ ಪ್ರಾದೇಶಿಕ ಹಿನ್ನಲೆಯ ಹೊರತಾಗಿ, ತನ್ನನ್ನು ತಾನು ಭಯೋತ್ಪಾದಕನನ್ನಾಗಿ/ಳನ್ನಾಗಿ ಪರಿವರ್ತಿಸಿಕೊಳ್ಳುವ ಆ ವ್ಯಕ್ತಿಯ ಮನಸ್ಸಿನಲ್ಲಿ ಅವುಗಳನ್ನು ಚಾಲನೆಗೊಳಿಸುವ ಕೇಂದ್ರವನ್ನು ಹೊಂದಿರುತ್ತವೆ. ಗುಪ್ತ ಕಾರ್ಯಸೂಚಿ ಅಥವಾ ಯಾವುದೇ ಭಯೋತ್ಪಾದಕ ಗುಂಪಿನ ಬಗೆಗಿನ ಮಾಹಿತಿಯು ಘಟನೆ ಜರುಗಿದ ನಂತರ ತಿಳಿದುಬರುತ್ತದೆ.

36. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು, ಸಾಕ್ಷಿದಾರರಿಂದ, ಹೆಚ್ಚು ನಿರ್ದಿಷ್ಟವಾಗಿ ಸಿಡಬ್ಲ್ಯು–55, ಸಿಡಬ್ಲ್ಯು–55ರಿಂದ 76, 78ರಿಂದ 86, 86ರಿಂದ 92, 94ರಿಂದ 96 ಮತ್ತು 98ರಿಂದ 112ರವರೆಗಿನ ಸಾಕ್ಷಿದಾರರಿಂದ ಯಾವುದೇ ಮಾತುಗಳಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.

37. ಕಾನೂನಿನ ಪ್ರಕಾರ ವ್ಯವಹರಿಸಬೇಕಾಗಿ ಅಪೇಕ್ಷಿಸುವ ಸದಸ್ಯ ಅಥವಾ ಸಂಸ್ಥೆಯು, ಭಾಗಶಃ ಸಂಘಟನೆಯನ್ನು ನಿಷೇಧಿಸತಕ್ಕದ್ದು, ಇಲ್ಲಿ ಹೆಸರು ಮತ್ತು ಸ್ವರೂಪ ಸಂಗತಿಯಾಗುವುದಿಲ್ಲ, ಆದರೆ, ರಾಷ್ಟ್ರದ ಭದ್ರತೆ ಮತ್ತು ಸಮಗ್ರತೆಗೆ ಸಂಬಂಧಿಸಿದಂತೆ ಅದರ ಜಾತ್ಯಾತೀತ ರಚನೆಯ ಮೇಲೆ ಕಾರ್ಯಾಚರಣೆಯ ಪ್ರಭಾವದ ವಿಧಾನವಾಗಿದೆ.

38. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು, ಗುರುತು ಕಂಡುಹಿಡಿಯುವ ಪ್ರದರ್ಶನ (ಪರೇಡ್) ನಡೆದಿರುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ. ಪ್ರಸ್ತುತ ಮೊಕದ್ದಮೆಯ ಸಾರಾಂಶವನ್ನು ಪರಿಗಣಿಸಲಾಗಿ, ಇದು ಕಡ್ಡಾಯ ಗುರುತು ಕಂಡುಹಿಡಿಯುವ ಸಂಗತಿಯ ಸುತ್ತ ಸುತ್ತುವುದಿಲ್ಲ.

39. ಈ ಸಂಬಂಧದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ***ಕೇರಳ ರಾಜ್ಯ –ವಿರುದ್ಧ– ರನೀಫ್*** ಮೊಕದ್ದಮೆಯಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "ಪ್ರಸ್ತುತ ಮೊಕದ್ದೆಮಯಲ್ಲಿ, ಪಿಎಫ್ಐ ಭಯೋತ್ಪಾದಕ ಸಂಘಟನೆ ಎಂದು ಸಾಬೀತುಪಡಿಸಲು ಇದುವರೆಗೂ ಯಾವುದೇ ಸಾಕ್ಷ್ಯವಿಲ್ಲ ಮತ್ತು ಅದರಿಂದಾಗಿ, ಪ್ರತ್ಯರ್ಜಿದಾರನನ್ನು ಪಿಎಫ್ಐ ಸಂಘಟನೆಗೆ ಸೇರಿದಕ್ಕಾಗಿ ಮಾತ್ರ ದಂಡನೆಗೆ ಒಳಪಡಿಸಲಾಗುವುದಿಲ್ಲ."

ಹಾಗೆಯೇ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ***ಅರೂಪ್ ಭೂಯಾನ್ –ವಿರುದ್ಧ– ಅಸ್ಸಾಂ ರಾಜ್ಯ*** ಮೊಕದ್ದಮೆಯಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

> *"ಎ. ಭಾರತ ಸಂವಿಧಾನ – ಅನುಚ್ಛೇದಗಳು 19(1)(ಸಿ) ಮತ್ತು (ಎ) ಹಾಗೂ 21 – ಸಂಘ–ಸಂಸ್ಥೆಗಳನ್ನು ರಚಿಸುವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು – ವ್ಯಾಪ್ತಿ – ನಿಷೇಧಿತ ಭಯೋತ್ಪಾದಕ ಸಂಘಟನೆಯ ಸದಸ್ಯತ್ವ – ಅದರಿಂದ ಊಹೆ – ನಿಷೇಧಿತ ಸಂಘಟನೆಯ ಸದಸ್ಯತ್ವ ಮಾತ್ರದಿಂದ ವ್ಯಕ್ತಿಯೊಬ್ಬನನ್ನು, ಅನ್ಯಥಾ ಆತನು ಹಿಂಸೆಗೆ ಜನರನ್ನು ಸೇರಿಸಿದ ಅಥವಾ ಪ್ರೇರೇಪಿಸಿದ ಅಥವಾ ಹಿಂಸೆಯ ಮೂಲಕ ಸಾರ್ವಜನಿಕ ಗಲಭೆ ಉಂಟು ಮಾಡಿದ ಅಥವಾ ಹಿಂಸೆಗೆ ಪ್ರಚೋದಿಸಿದ ಹೊರತು ಅಪರಾಧಿಯನ್ನಾಗಿಸುವುದಿಲ್ಲ – ಭಯೋತ್ಪಾದಕ ಮತ್ತು ವಿಧ್ವಂಸಕ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1987 – ಪ್ರಕರಣ 3(5) – ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967, ಪ್ರಕರಣ 10."*

---

40. ಇನ್ನೊಂದೆಡೆ, ಸಾಕ್ಷ್ಯದ ಸಂಗ್ರಹಣೆಯ ಆಧಾರದ ಮೇಲೆ ಮಾತ್ರವಲ್ಲದೆ, ಯಾವುವೇ ದಸ್ತಾವೇಜುಗಳ ನೈಜ ಒಳಾಂಶಗಳನ್ನು ಅಥವಾ ಸಾಕ್ಷ್ಯವನ್ನು ಓದುವಿಕೆಗಿಂತ ಹೆಚ್ಚಾಗಿ ಕಂಡುಹಿಡಿಯುವ ಮೂಲಕ ಅಪರಾಧವನ್ನು ಗುರುತಿಸಬೇಕಾಗುತ್ತದೆ. ಪಿಎಫ್ಐನ ಸ್ವರೂಪ ಮತ್ತು ಉದ್ದೇಶ ಕುರಿತು ತೀರ್ಪು ನೀಡಲು ಈ ನ್ಯಾಯಾಲಯವು ಕುಳಿತಿಲ್ಲ. ಅದಕ್ಕೆ ಬದಲಾಗಿ, ರುದ್ರೇಶನ ಹತ್ಯೆಯ ಅಪರಾಧದ ವ್ಯಾಪ್ತಿಯನ್ನು, ಸಮಾಜದಲ್ಲಿನ ವಿವಿಧ ಸಂಸ್ಥೆಗಳ ಅಥವಾ ಸಮುದಾಯಗಳ ಗೋಚರ ಅಥವಾ ಅಗೋಚರ ಪ್ರಭಾವವನ್ನು ಅದು ಹೊಂದಿರಲಿ ಅಥವಾ ಹೊಂದಿಲ್ಲದಿರಲಿ, ಅದನ್ನು ಪರೀಕ್ಷಿಸಬೇಕಾದ ಅಗತ್ಯವಿರಬಹುದಾಗಿದೆ. ಕೆಲವು ಬಹಿರಂಗ ಸಂಗತಿಗಳ, ಸಂದರ್ಭಗಳ ಹಾಗೂ ಮೃತ ರುದ್ರೇಶನು ಆರ್‌ಎಸ್‌ಎಸ್ ಸಂಘಟನೆಯ ಸದಸ್ಯನಾಗಿದ್ದನು ಎಂಬ ಸಂಗತಿಯ ಪರಾಮರ್ಶನೆಯ ಆಧಾರದ ಮೇಲೆ ತನಿಖೆಗೆ ಆದೇಶಿಸಲಾಗಿತ್ತು ಮತ್ತು ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

41. ಆರೋಪ ಸಂಖ್ಯೆ 2ನ್ನು ರೂಪಿಸುವುದನ್ನು ನಿರ್ಧರಿಸುವಾಗ, ಪ್ರತಿಯೊಂದು ಶಬ್ದವನ್ನು ತಪ್ಪುದಾರಿಗೆಳೆಯುವ ವಿಶ್ಲೇಷಣೆಗೆ ಅರ್ಜಿದಾರನು ಒತ್ತಾಯಿಸಲಾಗುವುದಿಲ್ಲ.

42. ವ್ಯಾಜ್ಯದ ಮೊದಲ ಸುತ್ತಿನಲ್ಲಿ, ಅರ್ಜಿದಾರನ ನಿಲುವನ್ನು, ವಿಶೇಷವಾಗಿ ಈ ನ್ಯಾಯಾಲಯದ ಆದೇಶಗಳ ಮೂಲಕ ನಕಾರಾತ್ಮಕಗೊಳಿಸಲಾಗಿತ್ತೆಂಬ ಸಂಗತಿಯನ್ನು ಗಮನಕ್ಕೆ ತೆಗೆದುಕೊಂಡರೂ, ಪ್ರಸ್ತುತ ಅರ್ಜಿಯು, ಭಾರತ ಸಂವಿಧಾನದ ಅಡಿಯಲ್ಲಿ ರಿಟ್ ಅಧಿಕಾರ ವ್ಯಾಪ್ತಿಯನ್ನು ಹಾಗೂ ಈ ನ್ಯಾಯಾಲಯದ ಅಂತರ್ನಿಹಿತ ಅಧಿಕಾರಗಳನ್ನು ಅನ್ವಯಿಸುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ವಿಷಯವನ್ನು ವ್ಯವಹರಣೆಗಳಲ್ಲಿ ಒತ್ತಾಯಿಸಲಾಗಿದೆ, ನಿರ್ಧರಿಸಲಾಗಿದೆ ಮತ್ತು ನ್ಯಾಯನಿರ್ಣಯಿಸಲಾಗಿದೆ ಹಾಗೂ ಪುನಃ ಅರ್ಜಿದಾರನು ಮುಂದಿನ ಸುತ್ತಿನಲ್ಲಿ ಬಂದಿದ್ದಾನೆ. ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾಗುವ 302ನೇ ಮತ್ತು 201ನೇ ಪ್ರಕರಣಗಳ ಹಾಗೂ ಆಯುಧಗಳ

ಅಧಿನಿಯಮದ 3ನೇ ಮತ್ತು 27ನೇ ಪ್ರಕರಣಗಳ ಹಾಗೂ ಕಾನೂನುಬಾಹಿರ ಕಾರ್ಯಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967ರ 15, 16, 17, 18 ಮತ್ತು 20 ಈ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ, ಬೆಂಗಳೂರಿನ XLIXನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ (ಎನ್‌ಐಎ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ) ಕಡತದಲ್ಲಿ ಇತ್ಯರ್ಥದಲ್ಲಿರುವ ವಿಶೇಷ ಸಿ.ಸಿ. ಸಂಖ್ಯೆ: 181/2017ರಲ್ಲಿನ ವ್ಯವಹರಣೆಗಳು ತಪ್ಪಾಗಿರಬಹುದಾದ ಸಂಭವನೀಯತೆಯನ್ನು ಕುರಿತು ಸಲಹೆ ನೀಡುವುದು ಸಂಗತಿಗಳ ಆಧಾರದ ಮೇಲಾಗಲಿ ಅಥವಾ ಕಾನೂನಿನಲ್ಲಾಗಲಿ ಯಾವುದೇ ಮುಖ್ಯ ಅರ್ಹತೆಯನ್ನು ಹೊಂದಿರುವುದಿಲ್ಲ.

ಗುಣಾರ್ಹತೆಗಳಿಲ್ಲದ ಈ ಅರ್ಜಿಯು ತಳ್ಳಿಹಾಕಲು ಯೋಗ್ಯವಾಗಿದೆ. ಆದ್ದರಿಂದ, ಈ ಮುಂದಿನ ಆಜ್ಞೆಯನ್ನು ಹೊರಡಿಸಲಾಗಿದೆ.

**ಆಜ್ಞೆ**

ಅರ್ಜಿಯನ್ನು ತಳ್ಳಿಹಾಕಲಾಗಿದೆ.